# ಕರ್ನಾಟಕ ವಿಧಾನಸಭೆ

## ಹದಿನೈದನೇ ವಿಧಾನಸಭೆ

## (ನಾಲ್ಕನೇ ಅಧಿವೇಶನ)

### ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ

## 22ನೇ ಜುಲೈ 2019

----

**[ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು - ಕಾರ್ಮಿಕ ಸಚಿವರು - ಅರಣ್ಯ ಸಚಿವರು - ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು - ಕಂದಾಯ ಇಲಾಖೆಯಿಂದ ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರುಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ].**

**ಒಟ್ಟು ಪ್ರಶ್ನೆಗಳು - 117**

----

15/4/548

**ಕ್ರಯಪತ್ರ ವಿಳಂಬ**

**900 ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಜಿಲ್ಲಾ ನೊಂದಣಿ/ಉಪನೊಂದಣಿ ಅಧಿಕಾರಿಗಳಿಗೆ ಎಷ್ಟು ಅಳತೆಯ ಜಾಗದಲ್ಲಿ ನಿರ್ಮಿಸಿದ ಬಹುಮಹಡಿ ಕಟ್ಟಡಗಳ ಕ್ರಯಪತ್ರ ಮಾಡಲು ಅನುಮತಿ ಇರುತ್ತದೆ; ಹೆಚ್ಚಿನ ಅಳತೆಯ ಜಾಗದಲ್ಲಿ ನಿರ್ಮಿಸಿದ ಬಹುಮಹಡಿಗಳ ಕಟ್ಟಡಗಳ ಮಾರಾಟ ಕ್ರಯಪತ್ರ ಕುರಿತು ನೊಂದಣೀ ಮಹಾ ಪರಿವೀಕ್ಷಕರು ಹಾಗೂ ಮುಂದ್ರಾಂಕ ಆಯುಕ್ತರ (ಐ.ಜಿ.ಆರ್) ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕಾರಣಕ್ಕೆ ಸಲ್ಲಿಸಲಾಗಿದೆ; ಇದಕ್ಕೆ ಸರ್ಕಾರ ಹೊರಡಿಸಿದ ಆದೇಶಗಳ ವಿವರ ನೀಡುವುದು;

ಆ) ಸಿ.ವಿ.ಸಿ. ಸಮಿತಿಯಲ್ಲಿರುವ ಸದಸ್ಯರುಗಳು ಯಾರು; ಸಮಿತಿಯ ಮೂಲಕ ಮುಂದ್ರಾಂಕ ಆಯುಕ್ತರ ಅನುಮೋದನೆಗಾಗಿ ಕಳೆದ ಎರಡು ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದ ವಿವಿಧ ಪ್ರದೇಶಗಳಿಂದ ಬಂದಿರುವ ಪ್ರಸ್ತಾವನೆಗಳು ಎಷ್ಟು; ಅವುಗಳಲ್ಲಿ ಅನುಮೋದನೆ ಮಾಡಿರುವ ಹಾಗೂ ಅನುಮೋದನೆ ನೀಡದಿರುವ ಪ್ರಸ್ತಾವನೆಗಳ ವಿವರಗಳನ್ನು ನೀಡುವುದು; ವಿಳಂಬಕ್ಕೆ ಕಾರಣಗಳೇನು (ವರ್ಷವಾರು, ಮತಕ್ಷೇತ್ರವಾರು,

ನಗರವಾರು, ಸರ್ವೆ ನಂ, ಕ್ಷೇತ್ರ,ಪ್ರದೇಶ ಎಷ್ಟು ಮಹಡಿಗಳ ಕಟ್ಟಡದ ಪರವಾನಿಗಾಗಿ ಪ್ರಸ್ತಾವನೆ ಬಂದಿರುವ ದಿನಾಂಕ, ಅನುಮೋದಿಸಿರುವ ದಿನಾಂಕದ ವಿವರ ನೀಡುವುದು);

ಇ) ಬಹುಮಹಡಿಗಳ ಕಟ್ಟಡಗಳ ಕ್ರಯಪತ್ರಕ್ಕಾಗಿ ಜಿಲ್ಲಾ ನೊಂದಣಿ ಅಧಿಕಾರಿಗಳಿಗೆ ನಿಗದಿಪಡಿಸಿದ ಗರಿಷ್ಠ ಅಳತೆಯನ್ನು 1000 ಸ್ಕ್ವೇರ್ ಮೀಟರ್‌ವರೆಗೆ ನಿಗದಿಪಡಿಸಲು ಸರ್ಕಾರಕ್ಕೆ ಇರುವ ಅಡತಡೆಗಳೇನು; ಇಲ್ಲವಾದಲ್ಲಿ, ಸಾರ್ವಜನಿಕ ಹಿತದೃಷ್ಟಿಯಿಂದ ಯಾವಾಗ ಕಾರ್ಯರೂಪಕ್ಕೆ ತರಲಾಗುವುದು;

ಈ) ಬೆಳಗಾವಿಯಲ್ಲಿ ಉಪನೊಂದಣಿ ಅಧಿಕಾರಿಗಳ ಮತ್ತೊಂದು ಕಛೇರಿಯನ್ನು ಆರಂಭಿಸುವ ಕುರಿತು ಜಿಲ್ಲಾ ನೊಂದಣಿ ಅಧಿಕಾರಿಗಳ ವರದಿಗಾಗಿ ಕೋರಿದ ದಿನಾಂಕ ಯಾವುದು; ಅವರಿಂದ ವರದಿ ಸ್ವೀಕೃತವಾಗಿದೆಯೇ;ಹಾಗಿದ್ದಲ್ಲಿ, ಯಾವಾಗ ಸ್ವೀಕೃತವಾಗಿದೆ; ಸರ್ಕಾರ ಕೈಗೊಂಡಿರುವ ಕ್ರಮವೇನು; ಕಛೇರಿ ಆರಂಭಿಸಲು ವಿಳಂಬಕ್ಕೆ ಕಾರಣವೇನು?

----

15/4/924

**ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕುರಿತು**

**901 ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ):**

ಮಾನ್ಯ **ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಒಳಾಂಗಣ ಕ್ರೀಡಾಂಗಣವನ್ನು ಆರಂಭಿಸುವ ಬಗ್ಗೆ ವಿಧಾನಸಭೆಯ ಯಾವುದಾದರೂ ಸಮಿತಿಯಲ್ಲಿ ಚರ್ಚಿಸಲಾಗಿದೆಯೇ; ಚರ್ಚಿಸಿದ್ದಲ್ಲಿ ವಿವರ ನೀಡುವುದು;

ಆ) ಬೆಳಗಾವಿಯಲ್ಲಿ ಒಳಾಂಗಣ ಕ್ರೀಡಾಂಗಣವನ್ನು ಮಾಡಲು ವಿಧಾನಸಭೆಯು ಸಮಿತಿಯು ನೀಡಿರುವ ವರದಿಯ ಮೇರೆಗೆ ಇಲಾಖೆಯು ಕೈಗೊಂಡಿರುವ ಕ್ರಮಗಳೇನು;( ವಿವರ ನೀಡುವುದು)

ಇ) ದಿನಾಂಕ: 01012017 ರಿಂದ 05072019 ರ ಅವಧಿಯಲ್ಲಿ ಸರ್ಕಾರದಿಂದ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಇಲಾಖೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು;(ಲೆಕ್ಕ ಶೀರ್ಷಿಕೆವಾರು, ವರ್ಷವಾರು ವಿವರ ನೀಡುವುದು)

ಈ) ರಾಜ್ಯದಲ್ಲಿ ಮೇಲಿನ ಅವಧಿಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ಕಾಮಗಾರಿಗಳಿಗೆ ಬಿಡುಗಡೆಗೊಳಿಸಿದ ಅನುದಾನವೆಷ್ಟು;( ಮತಕ್ಷೇತ್ರವಾರು, ವರ್ಷವಾರು, ಕಾಮಗಾರಿವಾರು, ಲೆಕ್ಕ ಶೀರ್ಷಿಕೆವಾರು ವಿವರ ನೀಡುವುದು)

ಉ) ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ಗರಡಿ ಮನೆ, ಒಳಾಂಗಣ ಕ್ರೀಡಾಂಗಣ, ಯುವಭವನ, ಯುವ ತರಬೇತಿ ಕೇಂದ್ರಗಳು, ವ್ಯಾಯಮ ಸಲಕರಣೆಗಳನ್ನು ಬಿಡುಗಡೆಗೊಳಿಸಲು, ಯುವನಿಕಾ ಸಭಾಂಗಣ, ಮುಂತಾದವುಗಳ ನಿರ್ಮಾಣಕ್ಕೆಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ; ಸಲ್ಲಿಸಿದ್ದಲ್ಲಿ ವಿವರ ನೀಡುವುದು; ಅವುಗಳ ಬಗ್ಗೆ ಸರ್ಕಾರವು ಕ್ರಮ ಕೈಗೊಳ್ಳಲಾಗಿದೆಯೇ; ಕೈಕೊಂಡಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)

----

15/4/1377

**ಅಂಗನವಾಡಿ ಕಟ್ಟಡಗಳು**

**902 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು

ದಯವಿಟ್ಟು ತಿಳಿಸುವರೆ **:** -

ಅ) ಕೊಪ್ಪಳ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ವಿವಿಧ ಯೋಜನೆಗಳಡಿ ಮಂಜೂರಾಗಿರುವ ಅಂಗನವಾಡಿ ಕಟ್ಟಡಗಳು ಎಷ್ಟು; ಯಾವ ಯಾವ ವರ್ಷಗಳಲ್ಲಿ ಮಂಜೂರಾಗಿವೆ; ಅಂಗನವಾಡಿ ಕಟ್ಟಡಗಳ ನಿರ್ಮಾಣ ಯಾವ ಹಂತದಲ್ಲಿದೆ; ಈವರೆಗೂ ಕಾಮಗಾರಿ ಪೂರ್ಣಗೊಳ್ಳದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಎಷ್ಟು ಕಟ್ಟಡಗಳು ಪೂರ್ಣಗೊಂಡಿರುವುದಿಲ್ಲ; ಯಾವ ಯಾವ ಹಂತದಲ್ಲಿ ಕಟ್ಟಡಗಳು ನಿರ್ಮಾಣ ಹಂತದಲ್ಲಿವೆ;

ಇ) ಇವುಗಳನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)

----

15/4/1378

**ಭೂ ಮಂಜೂರಾತಿ**

**903 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಖಾಸಗಿ ಕಾರ್ಖಾನೆಗಳಿಗೆ ಸರ್ಕಾರಿ ಜಮೀನು ಹಾಗೂ ರೈತರ ಜಮೀನುಗಳನ್ನು ಪರಬಾರೆ ಮಾಡಲು ಇರುವ ಸರ್ಕಾರದ ನಿಯಮಗಳೇನು;

ಆ) ಕೊಪ್ಪಳ ಜಿಲ್ಲೆಯಲ್ಲಿ ಎಂ.ಎಸ್.ಪಿ.ಎಲ್. ಪೆಲೆಟ್ ಪ್ಲಾಂಟ್ ಹಾಲವರ್ತಿ ಕಾರ್ಖಾನೆಗೆ ಭೂಮಿ ಮಂಜೂರಾತಿಗೆ ವಿಧಿಸಿದ ಷರತ್ತುಗಳೇನು;

ಇ) ಈ ಕಾರ್ಖಾನೆಗೆ ಮಂಜೂರು ಮಾಡಿರುವ ಸರ್ಕಾರಿ ಜಮೀನು ಹಾಗೂ ಭೂ ಸ್ವಾಧೀನಪಡಿಸಿಕೊಂಡ ರೈತರ ಜಮೀನು ಎಷ್ಟು;

ಈ) ಸದರಿ ಭೂಮಿಯಲ್ಲಿ ಎಷ್ಟು ಜಮೀನನ್ನು ಕೈಗಾರಿಕೆಗಾಗಿ ಹಾಗೂ ಕೈಗಾರಿಕೇತರ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿದೆ;

ಉ) ಸದರಿ ಕಾರ್ಖಾನೆಗೆ ನೀಡಿದ ಜಮೀನಿನಲ್ಲಿ ಬಳಸದೇ ಇರುವ ಜಮೀನು ಎಷ್ಟು; ಬಳಸದೇ ಉಳಿದ ಜಮೀನನ್ನು ಮರಳಿ ಪಡೆಯುವ ಉದ್ದೇಶ ಸರ್ಕಾರಕ್ಕಿದೆಯೇ;

ಊ) ಇದ್ದಲ್ಲಿ, ನಿಯಮಗಳೇನು ಹಾಗೂ ಯಾವ ಕಾಲಮಿತಿಯೊಳಗೆ ಜಮೀನನ್ನು ಹಿಂದಕ್ಕೆ ಪಡೆಯಲಾಗುವುದು?

----

15/4/1379

**ಅರಣ್ಯ ಪ್ರದೇಶ**

**904 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಕೊಪ್ಪಳ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು; (ತಾಲ್ಲೂಕುವಾರು ವಿವರ

ನೀಡುವುದು)
ಆ) ಈ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಪರಿಸರ ಸಂರಕ್ಷಣೆಗಾಗಿ ಎಷ್ಟು ಸಸಿಗಳನ್ನು, ಯಾವ ಯಾವ ಯೋಜನೆಗಳಡಿ ಬೆಳೆಸಲಾಗಿದೆ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)
ಇ) ಬೆಳೆಸಲಾದ ಗಿಡಗಳನ್ನು ಯಾವ ಯಾವ ರಸ್ತೆಗಳ ಪಕ್ಕದಲ್ಲಿ ನೆಡಲಾಗಿದೆ; ಎಷ್ಟು ಸಸಿಗಳನ್ನು ನೆಡಲಾಗಿದೆ; ಈ ಪೈಕಿ ಜೀವಂತವಾಗಿರುವ ಸಸಿಗಳು ಎಷ್ಟು;
ಈ) ಸಸಿ ನೆಡಲು ಖರ್ಚು ಮಾಡಿದ ಅನುದಾನವೆಷ್ಟು? (ಯೋಜನೆವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು)?

----

**15/4/1381**

## ರಾಜೀವ್ ಗಾಂಧಿ ಚೈತನ್ಯ ಯೋಜನೆ

**905 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಕಂದಾಯ ಇಲಾಖೆಯಿಂದ ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೊಪ್ಪಳ ಜಿಲ್ಲೆಯಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಎಷ್ಟು ಜನ ನಿರುದ್ಯೋಗಿ ಯುವಕಯುವತಿಯರು ಸ್ವಉದ್ಯೋಗ ಕೈಗೊಂಡಿರುತ್ತಾರೆ;
ಆ) 201718ನೇ ಸಾಲಿನಲ್ಲಿ ಎಷ್ಟು ಜನ ನಿರುದ್ಯೋಗಿ ಯುವಕಯುವತಿಯರಿಗೆ ಈ ಯೋಜನೆಯಡಿ ತರಬೇತಿ ನೀಡಲಾಗಿದೆ;
ಇ) 201718ನೇ ಸಾಲಿನಲ್ಲಿ ಎಷ್ಟು ಜನ ನಿರುದ್ಯೋಗಿ ಯುವಕ, ಯುವತಿಯರಿಗೆ ಸಹಾಯಧನ ಬಿಡುಗಡೆ ಮಾಡಲಾಗಿದೆ; ಎಷ್ಟು ಸಹಾಯಧನ ಪಾವತಿಸುವುದು ಬಾಕಿ ಇದೆ;
ಈ) ಬಾಕಿ ಇದ್ದಲ್ಲಿ, ಯಾವಾಗ ಸಹಾಯಧನ ಪಾವತಿಸಲಾಗುವುದು ಮತ್ತು ಬ್ಯಾಂಕುಗಳಿಂದ ಸಾಲ ಸೌಲಭ್ಯ ಯಾವಾಗ ಒದಗಿಸಲಾಗುವುದು? (ಮಾಹಿತಿ ನೀಡುವುದು)

----

**15/4/47**

## ಯುವಕ/ಯುವತಿಯರಿಗೆ ತರಬೇತಿ

**906 ಐಹೊಳೆ ದುರ್ಯೋಧನ ಮಹಾಲಿಂಗಪ್ಪ (ರಾಯಭಾಗ):**

ಮಾನ್ಯ **ಕಂದಾಯ ಇಲಾಖೆಯಿಂದ ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳಾವುವು; (ಸಂಪೂರ್ಣ ವಿವರ ನೀಡುವುದು)
ಆ) ಈ ಯೋಜನೆಗಳಲ್ಲಿ ಈವರೆವಿಗೂ ಎಷ್ಟು ಪುರುಷ ಹಾಗೂ ಮಹಿಳಾ ಯುವಕ/ಯುವತಿಯರಿಗೆ ತರಬೇತಿಯನ್ನು ನೀಡಲಾಗಿದೆ (ತರಬೇತಿವಾರು, ಜಿಲ್ಲಾವಾರು, ಲಿಂಗವಾರು ವಿವರ ನೀಡುವುದು)
ಇ) ತರಬೇತಿ ಪಡೆದ ನಂತರ ಈ ಯುವಕ/ಯುವತಿಯರಿಗೆ ಇಲಾಖಾ ವತಿಯಿಂದ ಸ್ವ ಉದ್ಯೋಗ /ಉದ್ಯಮೆ ನಡೆಸಲು ಇವರೆಗೂ ಸರ್ಕಾರ ನೀಡಿರುವ ಅನುದಾನವೇಷ್ಟು?( ಸಂಪೂರ್ಣ ವಿವರ ನೀಡುವುದು)

----

15/4/903

**ಪಾರ್ಕ್ ನಿರ್ಮಾಣ**

**907 ಐಹೊಳೆ ದುರ್ಯೋಧನ ಮಹಾಲಿಂಗಪ್ಪ (ರಾಯಭಾಗ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಯಭಾಗ ಮತಕ್ಷೇತ್ರದ ಅರಣ್ಯ ಪ್ರದೇಶದಲ್ಲಿ ಸಾರ್ವಜನಿಕರಿಗಾಗಿ ಪಾರ್ಕ್ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಕಾಮಗಾರಿಗೆ ಮಂಜೂರಾತಿ ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು; ಈ ಕಾಮಗಾರಿಗೆ ತಗಲಬಹುದಾದ ಅಂದಾಜು ಮೊತ್ತವೆಷ್ಟು; ಇಲ್ಲದಿದ್ದಲ್ಲಿ ಕಾರಣಗಳೇನು? (ವಿವರ ನೀಡುವುದು)

----

15/4/913

**ಕ್ರೀಡಾಂಗಣ ಅಭಿವೃದ್ಧಿ**

**908 ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ (ಕುಷ್ಟಗಿ):**

ಮಾನ್ಯ **ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಕ್ರೀಡಾಂಗಣದ ಕಾಮಗಾರಿಗಳು ಅರ್ಧಕ್ಕೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಪುನಃ ಪ್ರಾರಂಭಿಸಲು ಕೈಗೊಂಡಿರುವ ಕ್ರಮಗಳೇನು;

ಇ) ಸದರಿ ಕ್ರೀಡಾಂಗಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಾಮಗಾರಿಗಳಾವುವು; ಅವುಗಳಿಗೆ ತಗಲುವ ವೆಚ್ಚ ಎಷ್ಟು;

ಈ) ಅನುದಾನ ಮಂಜುರೂ ಮಾಡಿದ್ದಲ್ಲಿ ಬಿಡುಗಡೆಯಾದ ಅನುದಾನವೆಷ್ಟು ;ಅದರ ನಿರ್ವಹಣೆಯನ್ನು ಮಾಡುತ್ತಿರುವ ಸಂಸ್ಥೆಯಾವುದು? (ವಿವರ ನೀಡುವುದು)

----

15/4/446

**ಹೊಸ ಅಂಗನವಾಡಿ ಕೇಂದ್ರಗಳು**

**909 ಆನಂದ ಅಲಿಯಾಸ್ ವಿಶ್ವನಾಥ ಚಂದ್ರಶೇಖರ ಮಾಮನಿ (ಸವದತ್ತಿ ಯಲ್ಲಮ್ಮ):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸವದತ್ತಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಮಕ್ಕಳ ಗಣತಿ ಆಧಾರದ ಮೇಲೆ ನೂತನವಾಗಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಹೊಸ ಕೇಂದ್ರಗಳನ್ನು ಮಂಜೂರು ಮಾಡಲು ತೆಗೆದುಕೊಂಡ ಕ್ರಮಗಳು ಯಾವುವು (ವಿವರ

ನೀಡುವುದು);
ಇ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ವಹಣೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನ ಪಾಲು ಎಷ್ಟು (ವಿವರ ನೀಡುವುದು)?

----

15/4/926

**ಕ್ರೀಡಾಂಗಣ ಅಭಿವೃದ್ಧಿ**

**910 ಆನಂದ ಅಲಿಯಾಸ್ ವಿಶ್ವನಾಥ ಚಂದ್ರಶೇಖರ ಮಾಮನಿ (ಸವದತ್ತಿ ಯಲ್ಲಮ್ಮ):**

ಮಾನ್ಯ **ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸವದತ್ತಿ ಯಲ್ಲಮಾ ವಿಧಾನಸಭಾ ಕ್ಷೇತ್ರದ ಸವದತ್ತಿ ಮಹಾನಗರದ| ತಾಲ್ಲೂಕಾ ಕ್ರೀಡಾಂಗಣದ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನವೆಷ್ಟು; ಈ ಅನುದಾನದಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳಾವುವು; (ವಿವರ ನೀಡುವುದು)
ಆ) ಸವದತ್ತಿ ಮತಕ್ಷೇತ್ರದಲ್ಲಿರುವ ಗರಡಿ ಮನೆಗಳೆಷ್ಟು; ಸದರಿ ಗರಡಿ ಮನೆಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ; (ಗ್ರಾಮವಾರು ವಿವರ ನೀಡುವುದು)
ಇ) ಹಾಗಿದ್ದಲ್ಲಿ, ಸರ್ಕಾರವು ಯಾವ ಕಾಲಮಿತಿಯೊಳಗೆ ಗರಡಿ ಮನೆಗಳನ್ನು ಅಭಿವೃದ್ಧಿ ಪಡಿಸಲಾಗುವುದು? (ವಿವರ ನೀಡುವುದು)

----

15/4/1180

**ಅಂಗನವಾಡಿ ಕಟ್ಟಡಗಳ ಕೊರತೆ**

**911 ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಜಮಖಂಡಿ ಮತ್ತು ಬಾಗಲಕೋಟೆ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಅಂಗನವಾಡಿ ಕೇಂದ್ರಗಳನ್ನು ನಡೆಸಲು ಕಟ್ಟಡಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರದಿಂದ ಮಂಜೂರಾಗಿರುವ ಅನುದಾನ ಎಷ್ಟು; ಎಷ್ಟು ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗಿದೆ; (ಸಂಪೂರ್ಣ ವಿವರ ಒದಗಿಸುವುದು)
ಇ) 201819ನೇ ಸಾಲಿನಲ್ಲಿ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರದಿಂದ ಮಂಜೂರಾಗಿರುವ ಅನುದಾನ ಎಷ್ಟು? (ಸಂಪೂರ್ಣ ವಿವರ ಒದಗಿಸುವುದು)

----

15/4/1181

**ತಾಲ್ಲೂಕು ಘೋಷಣೆ**

**912 ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಜಮಖಂಡಿ ತಾಲ್ಲೂಕು ಸಾವಳಗಿಯನ್ನು ತಾಲ್ಲೂಕನ್ನಾಗಿ ಘೋಷಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ಮಾಹಿತಿ ನೀಡುವುದು)

----

**15/4/314**

**ಸರಕಾರಿ ಜಮೀನು**

**913 ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಬೆಳಗಾವಿ ಉತ್ತರ ವಿಧಾನ ಸಭಾ ಮತ ಕ್ಷೇತ್ರದಲ್ಲಿ ಎಷ್ಟು ಸರಕಾರಿ ಜಮೀನು ಲಭ್ಯವಿದೆ; ಅದರಲ್ಲಿ ಎಷ್ಟು ಗೋಮಾಳ/ಗೈರಾಣಕ್ಕೆ ಮತ್ತು ಸಂಬಂಧಿಸಿದೆ;
ಆ) ಸದರಿ ಜಮೀನು ಯಾವ ಯಾವ ಪ್ರದೇಶದಲ್ಲಿ ಲಭ್ಯವಿದೆ;( ಸ್ಥಳದೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು)

----

**15/4/880**

**ಪಿಂಚಣಿ ಯೋಜನೆಗಳು**

**914 ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಕಂದಾಯ ಇಲಾಖೆಯಿಂದ ವಿತರಿಸಲಾಗುವ ಪಿಂಚಣಿ ಯೋಜನೆಗಳಾವವು; (ವಿವರ ನೀಡುವುದು)
ಆ)ಬೆಳಗಾವಿ ಉತ್ತರ ಮತಕ್ಷೇತ್ರದಲ್ಲಿ ಕಂದಾಯ ಇಲಾಖೆಯಿಂದ ವಿತರಿಸಲಾಗುವ ವಿವಿಧ ಪಿಂಚಣಿ ಯೋಜನೆಗಳ ಫಲಾನುಭವಿಗಳೆಷ್ಟು;
ಇ) ಪ್ರಸ್ತುತ ರಾಜ್ಯ ಸರ್ಕಾರದ ಪಿಂಚಣಿ ಯೋಜನೆಗಳಲ್ಲಿ ಫಲಾನುಭವಿಗಳನ್ನು ಗುರುತಿಸಲು "ಪಿಂಚಣಿ ಅದಾಲತ್" ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;
ಈ) ಇದ್ದಲ್ಲಿ ಬೆಳಗಾವಿ ಉತ್ತರ ಮತಕ್ಷೇತ್ರದಲ್ಲಿ "ಪಿಂಚಣಿ ಅದಾಲತ್" ಯಾವಾಗ ಮಾಡಲಾಗುವುದು?

----

**15/4/889**

**ಗೇರು ಲೀಸ್ ಜಮೀನು**

**915 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು**

ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) 1957 ರಲ್ಲಿ ಗೇರು ಕೃಷಿಯನ್ನು ಮಾಡಲು ಕಂದಾಯ ಭೂಮಿಗಳನ್ನು 30 ವರ್ಷಗಳಿಗೆ ಲೀಸ್ ಆಧಾರದಲ್ಲಿ ಕೊಟ್ಟಿದ್ದು, ಸರ್ಕಾರದ ಷರತ್ತು ಪ್ರಕಾರ 30 ವರ್ಷಗಳ ನಂತರ ಎಕರೆ ಒಂದಕ್ಕೆ ರೂ.100/ ರಂತೆ ದರ ನಿಗದಿ ಪಡಿಸಿದ ಮೌಲ್ಯಕ್ಕೆ ಖಾಯಂ ಆಗಿ ದರ್ಖಾಸ್ತು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಷರತ್ತು ಪೂರೈಸಿದವರಿಗೆ ಖಾಯಂ ದರ್ಖಾಸ್ತು ಮಂಜೂರು ಮಾಡದೇ ಇರುವ ಮತ್ತು ವಿಧಿಸಿದ ಷರತ್ತುಗಳನ್ನು ಪಾಲಿಸದೇ ಇರಲು ಕಾರಣವೇನು?

----

15/4/510

## ರಸ್ತೆ ಅಗಲೀಕರಣ

**916 ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

(ಅ) ರಾಷ್ಟ್ರೀಯ ಹೆದ್ದಾರಿ 169 ರಲ್ಲಿ ತೀರ್ಥಹಳ್ಳಿ ಆಗುಂಬೆ ನಡುವೆ ರಸ್ತೆ ಅಗಲೀಕರಣಕ್ಕಾಗಿ ರಸ್ತೆ ಬದಿಯ ಮರಗಳನ್ನು ತೆರವುಗೊಳಿಸಲು ರಾಷ್ಟ್ರೀಯ ಹೆದ್ದಾರಿ ಇಲಾಖೆ ಹಣವನ್ನು ಅರಣ್ಯ ಇಲಾಖೆಗೆ ಪಾವತಿ ಮಾಡಿದೆಯೇ; ಮಾಡಿದ್ದಲ್ಲಿ ಯಾವ ದಿನಾಂಕದಂದು ಪಾವತಿ ಮಾಡಿದೆ; ಮರಗಳ ಸಂಖ್ಯೆ ಎಷ್ಟು;
(ಆ) ಹಣವನ್ನು ರಾಷ್ಟ್ರೀಯ ಹೆದ್ದಾರಿ ಇಲಾಖೆ ಪಾವತಿ ಮಾಡಿದ್ದಲ್ಲಿ ಮರಗಳನ್ನು ತೆರವುಗೊಳಿಸಲು ಇನ್ನೂ ಅನುಮತಿ ನೀಡದಿರಲು ಕಾರಣವೇನು;
(ಇ) ಹಳೆಯ ಮರಗಳು ಮಳೆ/ಗಾಳಿಗೆ ರಸ್ತೆ ಮೇಲೆ ಬೀಳುವ ಸಂಭವವಿರುವುದರಿಂದ ಜೀವ/ಆಸ್ತಿ ಪಾಸ್ತಿಗೆ ಹಾನಿಯಾಗುವುದು ಸರ್ಕಾರದ ಗಮನದಲ್ಲಿದೆಯೇ; ಇದ್ದಲ್ಲಿ ಯಾವ ಕ್ರಮಕೈಗೊಳ್ಳಲಾಗುವುದು?

----

15/4/804

## ಕಛೇರಿಗಳ ಪ್ರಾರಂಭ

**917 ಭಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಭಾವಿ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನಲ್ಲಿ ಎಲ್ಲಾ ಇಲಾಖೆಗಳ ಕಛೇರಿಗಳು ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ'
ಆ) ಹಾಗಿದ್ದಲ್ಲಿ; ಪ್ರಸ್ತುತ ಯಾವ ಯಾವ ಇಲಾಖೆಗಳು ಮೂಡಲಗಿ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ;( ಮಾಹಿತಿ ನೀಡುವುದು)
ಇ) ಮೂಡಲಗಿ ತಾಲ್ಲೂಕು ಕೇಂದ್ರಕ್ಕೆ ಎಲ್ಲಾ ಇಲಾಖೆಗಳ ಕಛೇರಿಗಳನ್ನು ಹಾಗೂ ಅಗತ್ಯವಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ನಿಯೋಜಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?(ಸಂಪೂರ್ಣ ಮಾಹಿತಿ ನೀಡುವುದು)

----

15/4/907

**ಉಪನೋಂದನಾಧಿಕಾರಿ ಕಛೇರಿ**

**918 ಭಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಭಾವಿ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಳಗಾವಿ ಜಿಲ್ಲೆಯ ಮೂಡಲಗಿಯನ್ನು ಹೊಸ ತಾಲ್ಲೂಕನ್ನಾಗಿ ಘೋಷಿಸಿದ್ದು ಉಪನೋಂದನಾಧಿಕಾರಿಗಳ ಕಛೇರಿಯನ್ನು ಸ್ಥಾಪಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರೈತರು ಹಾಗೂ ಸಾರ್ವಜನಿಕರು ಉಪನೋಂದನಾಧಿಕಾರಿಗಳ ಕಛೇರಿ ಕೆಲಸ ಕಾರ್ಯಗಳಿಗೆ ಸುಮಾರು 50ಕೀ.ಮೀ. ದೂರವಿರುವ ಗೋಕಾಕ್ ಉಪನೋಂದಣಾಧಿಕಾರಿಗಳ ಕಛೇರಿಗೆ ಹೋಗಬೇಕಾಗಿರುವುದರಿಂದ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಮೂಡಲಗಿ ತಾಲ್ಲೂಕು ಕೇಂದ್ರದಲ್ಲಿ ಉಪನೋಂದಣಾಧಿಕಾರಿಗಳ ಕಛೇರಿಯನ್ನು ಶೀಘ್ರವಾಗಿ ತೆರೆಯಲು ಸರ್ಕಾರವು ಕ್ರಮ ಕೈಗೊಂಡಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)

----

**15/4/1382**

**ಬಾಕಿ ಇರುವ ಪ್ರಕರಣಗಳು**

**919 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ವಿಜಯಪುರ ಜಿಲ್ಲೆಯಲ್ಲಿ ಕೆ.ಜೆ.ಪಿ., ಮೋಜನಿ, ಪೋಡಿ, ತತ್ಕಲ್ ಪೋಡಿ, ಹದ್ದುಬಸ್ತ್, ಅಲನೇಷನ್, 11ಇ ಮತ್ತು ಇತರೆ ಕಾರಣಗಳಿಗಾಗಿ ಬಾಕಿ ಇರುವ ಪ್ರಕರಣಗಳು ಎಷ್ಟು; (ವರ್ಷವಾರು, ಮತಕ್ಷೇತ್ರವಾರು, ಗ್ರಾಮ, ಸರ್ವೇ ನಂಬರ್, ಭೂ ಮಾಲೀಕರ ಹೆಸರು, ಕ್ಷೇತ್ರ, ಅರ್ಜಿ ಸಲ್ಲಿಸಿದ ದಿನಾಂಕಗಳ ಪ್ರತ್ಯೇಕ ವಿವರ ನೀಡುವುದು)

ಆ) ಆಕಾರಬಂದ್ ಹಾಗೂ ಪಹಣಿ ಪತ್ರಿಕೆಗಳ ವಿಸ್ತೀರ್ಣಕ್ಕೂ ಹೊಂದಾಣಿಕೆ ಇಲ್ಲದಿರುವ ಪ್ರಕರಣಗಳು ಎಷ್ಟು; ಆ ಪೈಕಿ ವಿವಿಧ ಕಾರಣಗಳಿಂದ ನ್ಯಾಯಾಲಯದಲ್ಲಿರುವ ಪ್ರಕರಣಗಳು ಎಷ್ಟು; (ಗ್ರಾಮವಾರು, ತಾಲ್ಲೂಕುವಾರು, ಜಿಲ್ಲಾವಾರು, ಮತಕ್ಷೇತ್ರವಾರು ವಿವರ ನೀಡುವುದು)

ಇ) ಕಳೆದ 3 ವರ್ಷಗಳಲ್ಲಿ ತಾಲ್ಲೂಕಿನಲ್ಲಿ ಸ್ವೀಕೃತಿಯಾದ, ಇತ್ಯರ್ಥಪಡಿಸಿದ ಹಾಗೂ ವಿಲೆಗೆ ಹಾಕಿದ ಪ್ರಕರಣಗಳು ಎಷ್ಟು;

ಈ) ಯಾವ ಕಾರಣಕ್ಕಾಗಿ ವಿಲೆಗೆ ಹಾಕಲಾಗಿದೆ; ಬಾಕಿ ಇರುವ ಪ್ರಕರಣಗಳು ಎಷ್ಟು; ಯಾವ ಕಾರಣಕ್ಕಾಗಿ ಬಾಕಿ ಇಡಲಾಗಿದೆ; (ಗ್ರಾಮ, ಸ್ವೀಕೃತಿ ದಿನಾಂಕ, ಸರ್ವೇ ನಂಬರ್, ಹೆಸರು, ಕ್ಷೇತ್ರ ಪ್ರಕರಣದ ಹಂತ, ಬಾಕಿ ಇದ್ದ / ವಿಲೆಗೆ ಹಾಕಿದ ಕಾರಣ ಒಳಗೊಂಡವಿವರಗಳನ್ನು ಮತಕ್ಷೇತ್ರವಾರು ನೀಡುವುದು)

----

**15/4/1383**

**ಗ್ರಾಮ ಸಹಾಯಕರ ವೇತನ**

920 **ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಕಂದಾಯ ಇಲಾಖೆಯಡಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಸದರಿ ನೌಕರರಿಗೆ ಮಾಸಿಕ ಎಷ್ಟು ವೇತನ ನೀಡಲಾಗುತ್ತಿದೆ; ಈ ನೌಕರರು 25 ವರ್ಷಗಳಿಂದ ಕಡಿಮೆ ವೇತನಕ್ಕೆ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು; (ಸಂಪೂರ್ಣ ಮಾಹಿತಿ ನೀಡುವುದು)

ಇ) ಸದರಿ ನೌಕರರನ್ನು ಇಲಾಖೆಯಲ್ಲಿ "ಡಿ" ಗ್ರೂಪ್ ನೌಕರರಾಗಿ ಖಾಯಂ ನೇಮಕಾತಿ ಮಾಡಿಕೊಂಡು ಆದೇಶ ಹೊರಡಿಸಲು ಸರ್ಕಾರವು ಈಗಾಗಲೇ ತೀರ್ಮಾನಿಸಿದೆಯೆ; ತೀರ್ಮಾನಿಸಿದ್ದ|ಲ್ಲಿ, ಸದರಿ ಆದೇಶ ಹೊರಡಿಸಲು ಇರುವ ಕಾನೂನಾತ್ಮಕ ತೊಡಕುಗಳೇನು; (ಮಾಹಿತಿ ನೀಡುವುದು)

ಈ) ಈಗಾಗಲೇ ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಇತರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ದಿನಗೂಲಿ ನೌಕರರನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮಗಳನ್ನು ರೂಪಿಸಿ ಇಲಾಖೆಗಳಲ್ಲಿ ವಿಲೀನಗೊಳಿಸಿದಂತೆ ಕಂದಾಯಇಲಾಖೆಯಲ್ಲಿಯೂ ವಿಲೀನಗೊಳಿಸಲು ಅವಕಾಶವಿದೆಯೇ; ಇದ್ದಲ್ಲಿ, ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು; ಒಂದು ವೇಳೆ ಆ ರೀತಿ ವಿಲೀನಗೊಳಿಸಲು ಇರುವ ಕಾನೂನಿನ ತೊಡಕುಗಳೇನು; (ಮಾಹಿತಿಯನ್ನು ನೀಡುವುದು)

ಉ) ರಾಜದಲ್ಲಿ ಕಂದಾಯ ಇಲಾಖೆಯಡಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರುಗಳನ್ನು ಇಲಾಖೆಯಲ್ಲಿ ವಿಲೀನಗೊಳಿಸುವ ಸಂಬಂಧ ನ್ಯಾಯಾಲಯದಲ್ಲಿ ಮೊಕದ್ದಮೆಗಳಿವೆಯೇ ಅಥವಾ ನ್ಯಾಯಾಲಯಗಳು ಯಾವುದಾದರು ಆದೇಶಗಳನ್ನು ನೀಡಿದೆಯೇ; ನೀಡಿದ್ದಲ್ಲಿ, ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು? (ಮಾಹಿತಿ ಒದಗಿಸುವುದು)

----

**15/4/1384**

**ದೇವಸ್ಥಾನಗಳ ಆದಾಯ**

921 **ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ ):**

ಮಾನ್ಯ **ಕಂದಾಯ ಇಲಾಖೆಯಿಂದ ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿನ ಮುಜರಾಯಿ ದೇವಾಲಯಗಳಿಂದ ಬಂದ ಒಟ್ಟು ಆದಾಯವೆಷ್ಟು;

ಆ) ಸದರಿ ದೇವಸ್ಥಾನಗಳಿಂದ ಬಂದ ಆದಾಯವನ್ನು ಯಾವ ಯಾವ ಕಾಮಗಾರಿಗಳಿಗಾಗಿ ವಿನಿಯೋಗಿಸಲಾಗಿದೆ; (ಕಾಮಗಾರಿ ಹೆಸರು ಸಹಿತ ಸಂಪೂರ್ಣ ಮಾಹಿತಿ ನೀಡುವುದು)

ಇ) ಮುಜರಾಯಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಕಳೆದ 3 ವರ್ಷಗಳಿಂದ ಸರ್ಕಾರವು ನಿಗದಿಪಡಿಸಿದ್ದ ಅನುದಾನ ಎಷ್ಟು; ಅದರಲ್ಲಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಬಿಡುಗಡೆಗೊಂಡ ಅನುದಾನ ಎಷ್ಟು; ಸದರಿ ಮೊತ್ತವನ್ನು ಯಾವ ಯಾವ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು, ದೇವಸ್ಥಾನದ ಹೆಸರು ಸಹಿತ ಸಂಪೂರ್ಣ ಮಾಹಿತಿ ನೀಡುವುದು)

ಈ) ಕಳೆದ 3 ವರ್ಷಗಳಲ್ಲಿ ವಿಜಯಪುರ ಜಿಲ್ಲೆಗೆ ನೀಡಿದ ಅನುದಾನವೆಷ್ಟು? (ತಾಲ್ಲೂಕುವಾರು,

ದೇವಸ್ಥಾನವಾರು ಮಾಹಿತಿ ನೀಡುವುದು)

----

15/4/388

**ಭಾಗ್ಯಲಕ್ಷ್ಮಿ ಯೋಜನೆ**

922 **ಬಸವರಾಜ್ ಮಟ್ಟಿಮುಡ್ (ಗುಲ್ಬರ್ಗಾ ಗ್ರಾಮಾಂತರ):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ 3 ವರ್ಷಗಳಲ್ಲಿ ಕಲಬುರಗಿ ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಆಯ್ಕೆಯಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ( ಹೆಸರು ಸಮೇತ ಪೂರ್ಣ ವಿವರ ಒದಗಿಸುವುದು)
ಆ) ಈ ಪೈಕಿ ವಿತರಿಸಿರುವ ಬಾಂಡ್‌ಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ನೀಡುವುದು)
ಇ) ನಿಗದಿಪಡಿಸಿರುವ ಸಮಯದಲ್ಲಿ ಬಾಂಡ್ ವಿತರಿಸದಿರಲು ಕಾರಣಗಳೇನು; ಬಾಂಡ್‌ಗಳನ್ನು ವಿತರಿಸಲು ಸರ್ಕಾರ ಕಾಲಮಿತಿ ನಿಗದಿಪಡಿಸಿದೆಯೇ? (ಪೂರ್ಣ ವಿವರ ಒದಗಿಸುವುದು)

----

15/4/694

**ಅಸಂಘಟಿತ ಕಾರ್ಮಿಕ ಕಲ್ಯಾಣ**

923 **ಬೆಳ್ಳಿ ಪ್ರಕಾಶ್ (ಕಡೂರು):**

ಮಾನ್ಯ **ಕಾರ್ಮಿಕ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿರುವ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೆ ರೂಪಿಸಿರುವ ಕಾರ್ಯಕ್ರಮಗಳು ಯಾವುವು;
ಆ) ಈ ಅಸಂಘಟಿತ ಕಾರ್ಮಿಕರಿಗೆ ನೀಡಲಾಗುತ್ತಿರುವ ಸೌಲಭ್ಯಗಳು ಯಾವುವು;
ಇ) ಕಡೂರು ತಾಲ್ಲೂಕಿನಲ್ಲಿ ಅಸಂಘಟಿತ ಕಾರ್ಮಿಕರ ನೊಂದಾವಣಿ ಮಾಡಲಾಗಿದೆಯೇ; ನೊಂದಾಯಿತ ಸದಸ್ಯರುಗಳ ಸಂಖ್ಯೆ ಎಷ್ಟು (ಮಾಹಿತಿ ಒದಗಿಸುವುದು) ?

----

15/4/893

**ಅತಿವೃಷ್ಟಿಯಿಂದಾದ ಹಾನಿಗೆ ಪರಿಹಾರ**

924 **ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) 2018-19ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಉಂಟಾದ ಅತಿವೃಷ್ಟಿಯಿಂದಾದ ಹಾನಿಗೆ ನೀಡಲಾಗಿರುವ ಪರಿಹಾರವೆಷ್ಟು; (ವಿವರಗಳನ್ನು ತಾಲ್ಲೂಕುವಾರು ಪಂಚಾಯ್ತಿವಾರು ನೀಡುವುದು)

ಆ) ಮನೆ ಕಳೆದುಕೊಂಡವರು ಎಷ್ಟು? ( ಸಂಪೂರ್ಣ/ ಬಾಗಶಃ ಗ್ರಾಮವಾರು ವಿವರಗಳನ್ನು ನೀಡುವುದು)
ಇ) ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ; ಪರಿಹಾರ ಕೋರಿ ಸಲ್ಲಿಕೆಯಾದ ಅರ್ಜಿಗಳು ಎಷ್ಟು; ಇವುಗಳಲ್ಲಿ ತಿರಸ್ಕೃತವಾದ ಅರ್ಜಿಗಳು ಎಷ್ಟು? (ಗ್ರಾಮವಾರು ವಿವರಫಿಗಳನ್ನು ನೀಡುವುದು)
ಈ) ಕಾಫಿಯೂ ಸೇರಿದಂತೆ ಬೆಳೆ ನಾಶ ಪರಿಹಾರ ಕೋರಿ ಬಂದ ಅರ್ಜಿಗಳು ಎಷ್ಟು? ಪರಿಹಾರ ನೀಡಲು ಬಾಕಿ ಉಳಿದಿರುವ ಅರ್ಜಿಗಳೆಷ್ಟು; ಪರಿಹಾರ ನೀಡದಿರಲು ಕಾರಣವೇನು;
ಉ) ಈ ಹಿಂದೆ ನೀಡಿದ ಪರಿಹಾರ ಹಣವನ್ನು ಹಿಂಪಡೆಯಲಾಗಿದೆಯೇ; ಹಾಗಿದ್ದಲ್ಲಿ ಕಾರಣವೇನು? (ವಿವರಗಳನ್ನು ನೀಡುವುದು)

----

15/4/894

**ರೈತರಿಗೆ ಪರಿಹಾರ**

925 **ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೊಡಗು ಜಿಲ್ಲೆಯಲ್ಲಿ ಸಂಕಷ್ಟಕ್ಕೆ ಒಳಗಾದ ರೈತರಿಗೆ ಪರಿಹಾರ ನೀಡಲು ಬಿಡುಗಡೆ ಮಾಡಲಾಗಿರುವ ಹಣವೆಷ್ಟು; ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ;( ವಿವರಗಳನ್ನು ನೀಡುವುದು)
ಆ) ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಬಿಡುಗಡೆಯಾದ ಹಣವೆಷ್ಟು; ಎಷ್ಟು ಕಾಮಗಾರಿಗಳನ್ನು ಗುರುತಿಸಿ ಅನುಮೋದನೆ ನೀಡಲಾಗಿದೆ;( ವಿವರಗಳನ್ನು ನೀಡುವುದು)
ಇ) ಕಾಮಗಾರಿಗಳಿಗೆ ಬಿಡುಗಡೆಯಾದ ಹಣದಲ್ಲಿ ಈವರೆಗೆ ಖರ್ಚಾಗಿರುವ ಹಣವೆಷ್ಟು; ಕಾಮಗಾರಿಗಳ ಅನುಮೋದನೆಗೆ ಇರುವ ಮಾನದಂಡಗಳೇನು?( ವಿವರ ನೀಡುವುದು)

----

15/4/896

**ನೇರ ನೇಮಕಾತಿ**

926 **ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ 2 ವರ್ಷಗಳಲ್ಲಿ ಅರಣ್ಯ ಇಲಾಖೆಯಲ್ಲಿ ಯಾವ ಯಾವ ಹುದ್ದೆಗಳಿಗೆ ನೇರ ನೇಮಕ ಪ್ರಕ್ರಿಯೆ ನಡೆಸಲಾಗಿರುತ್ತದೆ; ಈಗಾಗಲೇ ಎಷ್ಟು ಹುದ್ದೆಗಳಿಗೆ ನೇಮಕ ಮಾಡಲಾಗಿರುತ್ತದೆ; (ವರ್ಷವಾರು, ಹುದ್ದೆ, ವೃಂದವಾರು ವಿವರ ನೀಡುವುದು)
ಆ) ಸದರಿ ನೇಮಕಾತಿಗಳಲ್ಲಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಕ್ರಮಗಳಿಗೆ ಕಾರಣಗಳೇನು; ಸದರಿ ನೇಮಕಾತಿಗಳನ್ನು ತಡೆಹಿಡಿಯಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು; (ವಿವರ ನೀಡುವುದು)
ಇ) ದೈಹಿಕ ಸಾಮರ್ಥ್ಯ ಅವಶ್ಯಕವಿರುವ ಹುದ್ದೆಗಳ ನೇಮಕ ಪ್ರಕ್ರಿಯೆಯಲ್ಲಿ ಪಾರದರ್ಶಕವಾಗಿರದೆ ಸಂದರ್ಶನದಲ್ಲಿ ಹೆಚ್ಚಿನ ಅಂಕ ಗಳಿಸಿ ಅರ್ಹತೆ ಪಡೆದು ಹುದ್ದೆ ಪಡೆದುಕೊಂಡಿರುವವರ ದೈಹಿಕ ದೇಹದಾಢ್ಯ ಅರ್ಹತೆಯಲ್ಲಿ ವೈಫಲ್ಯವಾಗಿದೆಯೇ;
ಈ) ಅಭ್ಯರ್ಥಿಗಳು ನೇಮಕಗೊಂಡ ನಂತರ ದೇಹ ಸಾಮರ್ಥ್ಯವಿಲ್ಲವೆಂದು ಸೇವೆಯಿಂದ

ವಜಾಗೊಳಿಸಲಾಗಿದೆಯೇ; ಈ ರೀತಿಯ ಪ್ರಕರಣಗಳೆಷ್ಟು; ಈ ರೀತಿಯ ಪ್ರಕರಣಗಳು ಯಾವಾಗ ಮತ್ತು ಯಾವ ಪದವೃಂದದ ಹುದ್ದೆಯಲ್ಲಿ ನಡೆದಿದೆ;(ವಿವರಗಳನ್ನು ನೀಡುವುದು)

ಉ) ಈ ಮಾಹಿತಿಯು ಹುದ್ದೆಗೆ ನೇಮಕಗೊಂಡ ನಂತರ ತಿಳಿಸಿರುವಂತಹ ಇಲಾಖಾ ವೈಫಲ್ಯಕ್ಕೆ ಕಾರಣವೇನು; ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

----

15/4/895

**ಕೇಂದ್ರ ಮತ್ತು ರಾಜ್ಯ ಸರ್ಕಾರದ ಪರಿಹಾರ ಮೊತ್ತ**

**927 ಬೋಪಯ್ಯ ಕೆ.ಜಿ. (ವಿರಾಜಪೇಟೆ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) 201819ನೇ ಸಾಲಿನಲ್ಲಿ ಉಂಟಾದ ಅತಿವೃಷ್ಠಿ ಅನಾವೃಷ್ಠಿಗಳಿಗೆ ಪರಿಹಾರವಾಗಿ ಇದುವರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಿಡುಗಡೆ ಮಾಡಿರುವ ಮೊತ್ತವೆಷ್ಟು; (ಜಿಲ್ಲಾವಾರು ಬಿಡುಗಡೆ ಮಾಡಿದ ದಿನಾಂಕದೊಂದಿಗೆ (ವಿವರ ನೀಡುವುದು)

ಆ) ಕೊಡಗು ಜಿಲ್ಲೆಗೆ ಬಿಡುಗಡೆಯಾಗಿರುವ ಮೊತ್ತವೆಷ್ಟು; ಪರಿಹಾರದ ಕಾಮಗಾರಿಗಳು ಎಷ್ಟು; (ವಿವರ ನೀಡುವುದು)

ಇ) ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ, ಸಾರ್ವಜನಿಕರಿಂದ ಸಂಘ ಸಂಸ್ಥೆಗಳಿಂದ, ಸರ್ಕಾರಿ ನೌಕರರಿಂದ ಬಂದ ಮೊತ್ತವೆಷ್ಟು; ಬಿಡುಗಡೆ ಮಾಡಲಾಗಿರುವ ಮತ್ತು ಖರ್ಚಾಗಿರುವ ಹಣವೆಷ್ಟು; ಸದರಿ ಹಣದಿಂದ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳಾವುವು? (ವಿವರ ನೀಡುವುದು)

----

15/4/201

**ತಾರತಮ್ಯ ಹೋಗಲಾಡಿಸುವಿಕೆ**

**928 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು 2004ರಲ್ಲಿ ರಚಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರಸಕ್ತ ಸಾಲಿನವರಿಗೆ ಪರಿಷ್ಕರಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣವೇನು;

ಆ) ರಾಜ್ಯದ 4 ವಿಭಾಗಗಳಿಗೆ 2016ರ ಅಂಗವಿಕಲ ಕಾಯ್ದೆ ಅನ್ವಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಗಳನ್ನು ಮೇಲ್ದರ್ಜೆಗೇರಿಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಇ) 30 ಜಿಲ್ಲೆಗಳ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, 8 ಅಧೀಕ್ಷಕರುಗಳ ಮುಂಬಡ್ತಿಗಾಗಿ ನಿಗಧಿಗೊಳಿಸಿದ ಹುದ್ದೆಗಳ ಸಂಖ್ಯೆ ಎಷ್ಟು; ಮುಂಬಡ್ತಿಯಿಂದ ವಂಚಿತರಾದ ಅಧಿಕಾರಿಗಳಿಗೆ ತಾರತಮ್ಯ ಹೋಗಲಾಡಿಸಲು ಕೈಗೊಂಡ ಕ್ರಮಗಳೇನು;

ಈ) ಸಚಿವಾಲಯದಡಿ ಬರುವಂತಹ ಅಂಗವಿಕಲರ ಅಧಿನಿಯಮ ಕಛೇರಿಯ ಸಹಾಯಕ ಆಯುಕ್ತರ ಹುದ್ದೆಗೆ

ಇಲ್ಲಿಯವರೆಗೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಮುಂಬಡ್ತಿ ನೀಡಿರುವ ಅಧಿಕಾರಿಗಳಿಗೆ ಪ್ರಸಕ್ತ ಮುಂಬಡ್ತಿ ನೀಡಲು ಸರ್ಕಾರದ ಮುಂದೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ;(ಹೆಸರು ಹಾಗೂ ಅವಧಿಯ ಮಾಹಿತಿ ಒದಗಿಸುವುದು) ಹಾಗಿದ್ದಲ್ಲಿ, ಎಷ್ಟು ದಿನದಲ್ಲಿ ಕ್ರಮವಹಿಸಲಾಗುವುದು; ಉ) ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳನ್ನು "ಬಿ" ದರ್ಜೆ ಹುದ್ದೆಯಿಂದ "ಎ" ದರ್ಜೆಗೆ ಪದೋನ್ನತಿ ನೀಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದಲ್ಲಿ, ಎಷ್ಟು ದಿನಗಳಲ್ಲಿ ನೀಡಲಾಗುವುದು?

----

**15/4/881**

**ಕಿತ್ತೂರು ತಾಲ್ಲೂಕಿನಲ್ಲಿ ಸರ್ಕಾರಿ ಜಮೀನು**

**929 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಬೆಳಗಾವಿ ಜಿಲ್ಲೆ ಕಿತ್ತೂರು ತಾಲ್ಲೂಕಿನ ವಿವಧ ಗ್ರಾಮಗಳಲ್ಲಿ ಇರುವ ಸರ್ಕಾರಿ ಜಮೀನುಗಳೆಷ್ಟು; (ಗ್ರಾಮವಾರು ಎಕರೆಗುಂಟೆ ಮತ್ತು ಸರ್ಕಾರಿ ಜಮೀನು ಗೋಮಾಳ, ಗೈರಾಣ ಯಾವ ಮಾದರಿಗೆ ಸೇರಿದೆ ಎಂಬ ವಿವರ ನೀಡುವುದು)

ಆ) ಕಿತ್ತೂರು ತಾಲ್ಲೂಕಿನಲ್ಲಿ ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಜಮೀನುಗಳನ್ನು ಹಂಚಿಕೆಮಾಡಲಾಗಿದೆ; (ಇಲಾಖಾವಾರು ಹಂಚಿಕೆ ಮಾಡಲಾಗಿರುವ ಜಮೀನು ಎಕರೆಗುಂಟೆ ವಿವರ ನೀಡುವುದು)

ಇ) ಈ ಪೈಕಿ ಹಂಚಿಕೆ ಮಾಡದೇ ಉಳಿದಿರುವ ಜಮೀನುಗಳೆಷ್ಟು? (ಗ್ರಾಮವಾರು ಎಕರೆಗುಂಟೆ ವಿವರ ಮಾಹಿತಿ ನೀಡುವುದು)

----

**15/4/882**

**ಸ್ಮಶಾನಗಳಿಗೆ ಭೂಮಿ**

**930 ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಬೆಳಗಾವಿ ಜಿಲ್ಲೆ ಕಿತ್ತೂರು ವಿಧಾನಸಭಾ ಕ್ಷೇತ್ರದ ಕೆಲವು ಗ್ರಾಮಗಳಲ್ಲಿ ಸ್ಮಶಾನ ಭೂಮಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಆ ಗ್ರಾಮಗಳಾವುವು;

ಇ) ಸ್ಮಶಾನ ಭೂಮಿ ಇಲ್ಲದೇ ಇರುವ ಗ್ರಾಮಗಳಿಗೆ ಭೂಮಿ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಸದರಿ ಗ್ರಾಮಗಳಿಗೆ ಯಾವ ಕಾಲಮಿತಿಯಲ್ಲಿ ಸ್ಮಾಶಾನ ಭೂಮಿ ಒದಗಿಸಲಾಗುವುದು;

ಉ) ಈ ಪೈಕಿ ಉಳಿದಿರುವ ಜಮೀನುಗಳೆಷ್ಟು? (ಗ್ರಾಮವಾರು ಎಕರೆಗುಂಟೆಯ ವಿವರ ನೀಡುವುದು)

----

**15/4/883**

**ಕಾರ್ಮಿಕ ಇಲಾಖೆಯಲ್ಲಿ ದೊರೆಯುತ್ತಿರುವ ಸೌಲಭ್ಯಗಳು**

931 **ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಕಾರ್ಮಿಕ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) 201920ನೇ ಸಾಲಿನಲ್ಲಿ ಕಾರ್ಮಿಕ ಇಲಾಖೆಯಿಂದ ಜಾರಿಗೊಳಿಸಲಾದ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳಾವುವು ಈ ಯೋಜನೆಗಳನ್ನು ಪಡೆಯಲು ಇರುವ ಅರ್ಹತೆಗಳೇನು; (ಸಂಪೂರ್ಣ ವಿವರ ನೀಡುವುದು)
ಆ) ಬೆಳಗಾವಿ ಜಿಲ್ಲೆ ಚೆನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ ಎಷ್ಟು; (ಗ್ರಾಮವಾರು ಕಾರ್ಮಿಕರ ಹೆಸರು ನೀಡುವುದು)
ಇ) ಕಾರ್ಮಿಕರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸೌಲಭ್ಯ ನೀಡಲು ಕೈಗೊಂಡಿರುವ ಕ್ರಮಗಳೇನು;
ಈ) ಬೆಳಗಾವಿ ಜಿಲ್ಲೆ ಚೆನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರದ ಎಷ್ಟು ಕಾರ್ಮಿಕರು 01.04.2018 ರಿಂದ 31.05.2019 ರವರೆಗೆ ಸದರಿ ಯೋಜನೆಗಳ ಫಲಾನುಭವಿಗಳಾಗಿದ್ದಾರೆ (ಗ್ರಾಮವಾರು ಫಲಾನುಭವಿಗಳವಾರು ವಿವರ ನೀಡುವುದು)?

----

**15/4/884**

**ಸರ್ಕಾರಿ ಹೊಸ ಐ.ಟಿ.ಐ ಕಾಲೇಜುಗಳ ಸ್ಥಾಪನೆ**

932 **ದೊಡ್ಡನಗೌಡರ್ ಮಹಾಂತೇಶ್ ಬಸವಂತರಾಯ್ (ಕಿತ್ತೂರು):**

ಮಾನ್ಯ **ಕಂದಾಯ ಇಲಾಖೆಯಿಂದ ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಹೊಸ ಐ.ಟಿ.ಐ ಕಾಲೇಜುಗಳ ಸ್ಥಾಪನೆಗೆ ಸರ್ಕಾರದ ನಿಯಮವೇನು;
ಆ) ರಾಜ್ಯದ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ 2018-19 ಮತ್ತು 2019-20ನೇ ಸಾಲಿನಲ್ಲಿ ಎಷ್ಟು ಸರ್ಕಾರಿ ಹೊಸ ಐ.ಟಿ.ಐ ಕಾಲೇಜುಗಳನ್ನು ಆರಂಭಿಸಲಾಗಿದೆ: (ಕ್ಷೇತ್ರವಾರು ವಿವರ ನೀಡುವುದು)
ಇ) ಬೆಳಗಾವಿ ಜಿಲ್ಲೆ ಚೆನ್ನಮ್ಮನ ಕಿತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಸರ್ಕಾರಿ ಐ.ಟಿ.ಐ. ಕಾಲೇಜುಗಳಿವೆ (ವಿವರ ನೀಡುವುದು);
ಈ) ಈ ವಿಧಾನಸಭಾ ಕ್ಷೇತ್ರದಲ್ಲಿ ಹೊಸ ಐ.ಟಿ.ಐ ಕಾಲೇಜು ಆರಂಭಿಸಲು ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಉ) ಬಂದಿದ್ದಲ್ಲಿ, ಹೊಸ ಐ.ಟಿ.ಐ ಕಾಲೇಜು ಆರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

----

**15/4/287**

**ಬರಪೀಡಿತ ತಾಲ್ಲೂಕುಗಳು**

933 **ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಎಷ್ಟು ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ; (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಬರದಿಂದ ಮುಂಗಾರು ಹಿಂಗಾರು ಹಂಗಾಮಿನಲ್ಲಿ ನಷ್ಟ ಅನುಭವಿಸಿದ ರೈತರ ಸಂಖ್ಯೆಯೆಷ್ಟು; ಈ ರೈತರಿಗೆ ಎನ್.ಡಿ.ಆರ್.ಎಫ್ ನಿಯಮದ ಪ್ರಕಾರ ಪರಿಹಾರ ಒದಗಿಸಲಾಗಿದೆಯೇ; ಪರಿಹಾರ ಒದಗಿಸದೇ ಇದ್ದಲಿ ಅದಕ್ಕೆ ಕಾರಣಗಳೇನು ?

----

**15/4/921**

**ಅಂಗನವಾಡಿ ಕಾರ್ಯಕರ್ತೆಯ ಮರಣ ಪರಿಹಾರ**

**934 ಕಾರಜೋಳ ಗೋವಿಂದ ಮಕಟಪ್ಪ (ಮುದೋಳ):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಬುದ್ನಿ, ಕೆ.ಡಿ. ಗ್ರಾಮದಲ್ಲಿ ಅಂಗನವಾಡಿ ಕಾರ್ಯಕರ್ತೆಯಾಗಿ ಸೇವೆ ಸಲ್ಲಿಸುತ್ತಿದ್ದ ಒಬ್ಬ ಮಹಿಳೆ ಕಾರ್ಯನಿರ್ವಹಿಸುತ್ತಿದ್ದಾಗ ಮರಣ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಇವರ ಕುಟುಂಬಕ್ಕೆ ಮರಣ ಪರಿಹಾರ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರೂ ಪರಿಹಾರ ವಿಳಂಬಕ್ಕೆ ಕಾರಣವೇನು;

ಇ) ಎಷ್ಟು ದಿನಗಳಲ್ಲಿ ಮರಣ ಪರಿಹಾರ ಮಂಜೂರು ಮಾಡಲಾಗುವುದು?

----

**15/4/922**

**ಪುರಸಭೆಯ ವ್ಯಾಪ್ತಿಗೆ ಜಮೀನುಗಳ ಸೇರ್ಪಡೆ**

**935 ಕಾರಜೋಳ ಗೋವಿಂದ ಮಕಟಪ್ಪ (ಮುದೋಳ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಬೆಳಗಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕೆಲವು ಜಮೀನುಗಳು ಮಹಾಲಿಂಗಪೂರ ಪುರಸಭೆ ವ್ಯಾಪ್ತಿಗೆ ಸೇರ್ಪಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅಂತಹ ಎಷ್ಟು ಜಮೀನುಗಳು ಸೇರ್ಪಡೆಯಾಗಿವೆ; (ಸರ್ವೆ ನಂ. ಸಮೇತ ಮಾಹಿತಿ ಒದಗಿಸುವುದು)

ಇ) ಮಹಾಲಿಂಗಪುರ ಪುರಸಭೆ ವ್ಯಾಪ್ತಿಗೆ ಸೇರಿರುವ ಜಮೀನುಗಳ ಮಾಲೀಕರು ಬೆಳಗಲಿ ಪಟ್ಟಣ ಪಂಚಾಯಿತಿಯಲ್ಲಿಯ ಆಸ್ತಿ ರಿಜಿಸ್ಟರ್‌ನಲ್ಲಿ ನಮೂದಿಸಿಕೊಂಡು ಕರಗಳನ್ನು ಭರಣಾ ಮಾಡುತ್ತಿರುವುದರಿಂದ ಈ ಜಮೀನುಗಳನ್ನು ಬೆಳಗಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಸೇರ್ಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು;

ಈ) ಎಷ್ಟು ದಿನಗಳಲ್ಲಿ ಸೇರ್ಪಡಿಸಲಾಗುವುದು?

----

**15/4/1172**

## ಬರಗಾಲ ಪೀಡಿತ ತಾಲ್ಲೂಕುಗಳು

**936 ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ರಾಜ್ಯದಲ್ಲಿ 201819ನೇ ಸಾಲಿನಲ್ಲಿ ಬರಗಾಲ ಪೀಡಿತವೆಂದು ಘೋಷಿಸಿರುವ ತಾಲ್ಲೂಕುಗಳ ಸಂಖ್ಯೆ ಎಷ್ಟು; ಅವುಗಳು ಯಾವುವು; (ವಿವರ ನೀಡುವುದು)
ಆ) ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ ಸರ್ಕಾರ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವುವು; ಸದರಿ ಕಾಮಗಾರಿಗಳ ಅನುಷ್ಠಾನಕ್ಕೆ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)
ಇ) ಜೂನ್ ತಿಂಗಳು ಮುಗಿದರೂ ಕೂಡ ಆಳಂದ ತಾಲ್ಲೂಕಿನಲ್ಲಿ ಮಳೆ ಬರದೆ ಇರುವುದರಿಂದ ಮುಂಜಾಗ್ರುತೆಯಾಗಿ ಸರ್ಕಾರ ಕೈಗೊಂಡ ಕಾರ್ಯಕ್ರಮಗಳು ಯಾವುವು? (ವಿವರ ನೀಡುವುದು)

----

15/4/1173

## ಮಾಶಾಸನ

**937 ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಕಳೆದ ಮೂರು ವರ್ಷಗಳಲ್ಲಿ ಆಳಂದ ತಾಲ್ಲೂಕಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಮಾಶಾಸನ ಮಂಜೂರಾತಿ ಆದೇಶಗಳು ನೀಡಿ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಹೋಬಳಿವಾರು ಗ್ರಾಮವಾರು ಪ್ರತ್ಯೇಕ ಮಾಹಿತಿ ನೀಡುವುದು)
ಆ) ಬಂದಿದ್ದಲ್ಲಿ, ಬಡವರಿಗೆ ಮೋಸ ಮಾಡಿ ಮಾಶಾಸನ (ವಿಧವಾ, ವೃದ್ಧಾಪ್ಯ ಮತ್ತು ಅಂಗವಿಕಲ) ಮಂಜೂರಾತಿ ಆದೇಶ ನೀಡಿ ಹಣ ಪಾವತಿಸದಿರುವ ಅಧಿಕಾರಿಗಳನ್ನು ಗುರುತಿಸಿ ಅವರ ವಿರುದ್ಧ ಯಾವ ಕ್ರಮಕೈಗೊಳ್ಳಲಾಗಿದೆ;
ಇ) ಪ್ರಸ್ತುತ ಮಾಶಾಸನಗಳನ್ನು ಪಡೆಯಲು ಸರ್ಕಾರ ರೂಪಿಸಿರುವ ಮಾನದಂಡಗಳೇನು? (ಸಂಪೂರ್ಣ ವಿವರದ ಮಾಹಿತಿ ನೀಡುವುದು)

----

15/4/378

## ಡೀಮ್ಡ್ ಫಾರೆಸ್ಟ್

**938 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ರಾಜ್ಯದ ಗ್ರಾಮೀಣ ಭಾಗದ ಕಂದಾಯ ಇಲಾಖೆ ಜಮೀನುಗಳನ್ನು ಡೀಮ್ಡ್ ಫಾರೆಸ್ಟ್ ಜಮೀನೆಂದು ಆರ್.ಟಿ.ಸಿ.ಯಲ್ಲಿ ನಮೂದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅನಾದಿಕಾಲದಿಂದಲೂ ಭೂಮಿಯನ್ನು ಅನುಭೋಗಿಸಿ, ಮನೆ ಕಟ್ಟಿಕೊಂಡು ಬಂದಿರುವ ನಿವಾಸಿಗಳು ಅಕ್ರಮಸಕ್ರಮ ಯೋಜನೆಯಡಿ ಅರ್ಜಿ ಸಲ್ಲಿಸಿದ್ದು, ಕುಮ್ಕಿ ಮತ್ತು ಡೀಮ್ಡ್ ಫಾರೆಸ್ಟ್ ಎಂದು ನಮೂದಿಸಿದ ಕಾರಣ ಭೂಮಿ ಮಂಜೂರಾತಿಗೆ ತೊಡಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)?

----

15/4/887

**ಡೀಮ್ಡ್ ಫಾರೆಸ್ಟ್**

**939 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಈ ಹಿಂದೆ 9,94,000 ಹೆಕ್ಟೇರ್ ಜಮೀನನ್ನು ಡೀಮ್ಡ್ ಫಾರೆಸ್ಟ್ ಎಂದು ಅವೈಜ್ಞಾನಿಕವಾಗಿ ಘೋಷಿಸಲಾಗಿದ್ದು, ಪುನಃ ಸ್ಥಳ ಪರಿಶೀಲನೆ ಮಾಡಿ 6,63,815 ಹೆಕ್ಟೇರ್ ಜಮೀನನ್ನು ಡೀಮ್ಡ್ ಫಾರೆಸ್ಟ್ ನಿಂದ ವಿರಹಿತಗೊಳಿಸಿ ಪ್ರಸ್ತಾವನೆಯನ್ನು ತಯಾರಿಸಿರುವುದಾಗಿ ತಿಳಿದು ಬಂದಿದ್ದು, ವಿರಹಿತಗೊಳಿಸಿದ ಪ್ರಸ್ತಾವನೆಯ ಬಗ್ಗೆ ಸರ್ಕಾರ ಮಾನ್ಯ ಉಚ್ಚನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಿದೆಯೇ?

----

15/4/888

**ಕರಾವಳಿ ವಲಯ ಮ್ಯಾನೇಜ್‌ಮೆಂಟ್ ಪ್ಲಾನ್ಷಿಯನ್ (CZMP)**

**940 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕರಾವಳಿ ವಲಯ ಮ್ಯಾನೇಜ್‌ಮೆಂಟ್ ಪ್ಲಾನ್ಷಿಯನ್ (CZMP) ಎಂದರೇನು;

ಆ) ಯಾವ ಯಾವ ರಾಜ್ಯದಲ್ಲಿ ಕರಾವಳಿ ನಿಯಂತ್ರಣ ವಲಯ (CZMP) ಜಾರಿಯಲ್ಲಿದೆ;

ಇ) ಕೇರಳ ಮತ್ತು ಗೋವಾ ರಾಜ್ಯಗಳಲ್ಲಿರುವಂತೆ ಕರ್ನಾಟಕದಲ್ಲಿ (CZMP) ನಿಯಮ ತರಲು ಸರ್ಕಾರ ಕೈಗೊಂಡ ಕ್ರಮವೇನು;

ಈ) ಗೋವಾ ಮತ್ತು ಕೇರಳದಲ್ಲಿ 50 ಮೀ. ವ್ಯಾಪ್ತಿಗೆ CZMP ಸೀಮಿತವಾಗಿದ್ದು, ಕರ್ನಾಟಕದಲ್ಲಿ ಮಾತ್ರ I, II, III ಎಂದು ವಲಯಗಳನ್ನು ಮಾಡಿ ಯಾವುದೇ ಅಭಿವೃದ್ಧಿ ಕೆಲಸ ಮಾಡಲು ಅನುದಾನ ನೀಡದೇ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು?

----

15/4/891

**ಗೇರು ಲೀಸ್ ಜಮೀನು**

**941 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) 1957 ರಲ್ಲಿ ಗೇರು ಕೃಷಿಯನ್ನು ಮಾಡಲು ಕಂದಾಯ ಭೂಮಿಗಳನ್ನು 30 ವರ್ಷಗಳಿಗೆ ಲೀಸ್ ಆಧಾರದಲ್ಲಿ ಕೊಟ್ಟಿದ್ದು, ಸರ್ಕಾರದ ಷರತ್ತು ಪ್ರಕಾರ 30 ವರ್ಷಗಳ ನಂತರ ಎಕರೆ ಒಂದಕ್ಕೆ ರೂ.100/ ರಂತೆ ದರ ನಿಗದಿ ಪಡಿಸಿದ ಮೌಲ್ಯಕ್ಕೆ ಖಾಯಂ ಆಗಿ ದರ್ಖಾಸ್ತು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಷರತ್ತು ಪೂರೈಸಿದವರಿಗೆ ಖಾಯಂ ದರ್ಖಾಸ್ತು ಮಂಜೂರು ಮಾಡದೇ ಇರುವ ಮತ್ತು ವಿಧಿಸಿದ ಷರತ್ತುಗಳನ್ನು ಪಾಲಿಸದೇ ಇರಲು ಕಾರಣವೇನು?

----

15/4/890

**ತಾಲ್ಲೂಕು ಕಛೇರಿಗಳು**

**942 ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಮಂಜೂರಾದ ತಾಲ್ಲೂಕು ಕೇಂದ್ರಗಳಲ್ಲಿ ಇರಬೇಕಾದ ತಾಲ್ಲೂಕು ಮಟ್ಟದ ಅಧಿಕಾರಿಗಳ ಕಛೇರಿಗಳು ಯಾವುವು; ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಮಟ್ಟದ ಕಛೇರಿಗಳು ಯಾವುವು; ಮಂಜೂರಾಗಲು ಬಾಕಿ ಇರುವ ತಾಲ್ಲೂಕು ಮಟ್ಟದ ಕಛೇರಿಗಳು ಯಾವುವು; (ತಾಲ್ಲೂಕುವಾರು ಮಾಹಿತಿ ನೀಡುವುದು)
ಆ) ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಕಛೇರಿಗಳಲ್ಲಿ ತಾಲ್ಲೂಕು ಮಟ್ಟದ ಹುದ್ದೆಗಳನ್ನು ಸೃಜಿಸಲಾಗಿದೆಯೇ; ಇಲ್ಲವಾದಲ್ಲಿ ಯಾವಾಗ ಸೃಜಿಸಲಾಗುವುದು?

----

15/4/912

**ವಿದ್ಯುತ್‌ನ ಪರ್ಯಾಯ ವ್ಯವಸ್ಥೆ**

**943 ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿರುವ ತಾಲ್ಲೂಕು ಕಛೇರಿ ಮತ್ತು ನಾಡ ಕಛೇರಿಗಳಲ್ಲಿ ್ಣೆ ಅಳವಡಿಸಿರುವ ಕಂಪ್ಯೂಟರ್‌ಗಳಿಗೆ ವಿದ್ಯುತ್ ಇಲ್ಲದ ಸಂದರ್ಭದಲ್ಲಿ ಯಾವ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ;
ಆ) ಇವುಗಳಿಗೆ ಜನರೇಟರ್, ಯುಪಿಎಸ್, ಬ್ಯಾಟರಿ ಸೌಲಭ್ಯವನ್ನು ಕಲ್ಪಸಲಾಗಿದಯೇ;ಇಲ್ಲದಿದ್ದಲ್ಲಿ ಕಾರಣಗಳೇನು;
ಇ) ಕೆಲವು ಕಛೇರಿಗಲ್ಲಿ ಜನರೇಟರ್, ಯುಪಿಎಸ್, ಬ್ಯಾಟರಿ ಸೌಲಭ್ಯಗಳನ್ನು ಅಳವಡಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಇದರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕರು ಇಲಾಖೆಯ ಸೌಲಭ್ಯಗಳನ್ನು ಪಡೆಯಲು ಅಡಚಣೆಯಾಗುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;
ಉ) ಗ್ರಾಮೀಣಪ್ರದೇಶಗಳಲ್ಲಿರುವ ಕಛೇರಿಗಳಿಗೆ ವಿದ್ಯುತ್ ಕಡಿತ ಸಂದರ್ಭದಲ್ಲಿ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಿ ಸಾರ್ವಜನಿಕರಿಗೆ ಇಲಾಖೆಯ ಸೌಲಭ್ಯಗಳನ್ನು ಪಡೆಯಲು ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)

----

15/4/535

**ಅಕ್ರಮ ಸಕ್ರಮ**

**944 ಹರೀಶ್ ಪೂಂಜ (ಬೆಳ್ತಂಗಡಿ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಬೆಳ್ತಂಗಡಿ ತಾಲ್ಲೂಕಿನ ಅಕ್ರಮ ಸಕ್ರಮ (Form57) ದಲ್ಲಿ 31032018 ರವರೆಗೆ ಸ್ವೀಕಾರವಾದ ಅರ್ಜಿಗಳ ಸಂಖ್ಯೆ ಎಷ್ಟು;( ವಿವರ ನೀಡುವುದು)

ಆ) ವಿಲೆವಾರಿ ಆದ ಅರ್ಜಿಗಳು ಎಷ್ಟು;ವಿಲೆವಾರಿಯಾಗದೆ ಬಾಕಿ ಉಳಿದ ಒಟ್ಟು ಅರ್ಜಿಗಳೆಷ್ಟು, ಅರ್ಜಿಗಳು ಬಾಕಿ ಉಳಿಯಲು ಕಾರಣಗಳೇನು;

ಇ) ಪ್ರಸ್ತುತ ಸಾಲಿನಲ್ಲಿ ಸ್ವೀಕೃತವಾದ ಅಕ್ರಮ ಸಕ್ರಮ ಅರ್ಜಿಗಳ ವಿಲೇವಾರಿಗೆ ಸಮಿತಿ ರಚನೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

----

15/4/340

**ಅಕ್ರಮಸಕ್ರಮ**

**945 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಕಳೆದ ಮೂರು ವರ್ಷಗಳಿಂದ ಭೂ ಕಂದಾಯ ಕಾಯ್ದೆ 94ಸಿ, 94ಸಿಸಿ (ಅಕ್ರಮಸಕ್ರಮ) ಯೋಜನೆಯಡಿ ಸಾರ್ವಜನಿಕರು ಸಲ್ಲಿಸಿದ ಅರ್ಜಿಗಳೆಷ್ಟು; (ಬೆಳಗಾವಿ ಜಿಲ್ಲೆ/ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಸದರಿ ಅರ್ಜಿಗಳು ವಿಲೇವಾರಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅಕ್ರಮಸಕ್ರಮ ಯೋಜನೆಯ ಮಾನದಂಡಗಳೇನು; ಯಾವ ಮಾನದಂಡಗಳ ಆಧಾರದ ಮೇಲೆ ಸರ್ಕಾರ ಸಕ್ರಮಗೊಳಿಸಲಾಗುವುದು;

ಈ) ಅಕ್ರಮಸಕ್ರಮ ಪ್ರಕರಣಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಚಿಕ್ಕೋಡಿ/ನಿಪ್ಪಾಣಿ ತಾಲ್ಲೂಕುವಾರು ಮಾಹಿತಿ ನೀಡುವುದು)?

----

15/4/916

**ಪೋಡಿ ಮುಕ್ತ ಗ್ರಾಮ ಯೋಜನೆ**

**946 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ರಾಜ್ಯದಲ್ಲಿ ಪೋಡಿ ಮುಕ್ತ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗಿದೆ;

ಆ) ಪೋಡಿ ಮುಕ್ತ ಗ್ರಾಮ ಯೋಜನೆಯ ರೂಪುರೇಷೆಗಳು ಹಾಗೂ ಮಾನದಂಡಗಳೇನು;
ಇ) ಚಿಕ್ಕೋಡಿ/ನಿಪ್ಪಾಣಿ ತಾಲ್ಲೂಕುಗಳಲ್ಲಿ ಇಲ್ಲಿಯವರೆಗೆ ಎಷ್ಟು ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮ ಯೋಜನೆಯಲ್ಲಿ ಪರಿಗಣಿಸಲಾಗಿದೆ; (ಮತಕ್ಷೇತ್ರವಾರು/ಗ್ರಾಮವಾರು ಸಂಪೂರ್ಣ ಮಾಹಿತಿಯನ್ನು ನೀಡುವುದು)
ಈ) ನಿಪ್ಪಾಣಿ ಹಾಗೂ ಚಿಕ್ಕೋಡಿ ತಾಲ್ಲೂಕಿನಲ್ಲಿ 201920ನೇ ಸಾಲಿನಲ್ಲಿ ಯಾವ ಯಾವ ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮ ಯೋಜನೆಗೆ ಆಯ್ಕೆ ಮಾಡಲಾಗಿದೆ?

----

15/4/917

## ಹೋಬಳಿಗಳ ರಚನೆ

**947 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಹೊಸದಾಗಿ ಘೋಷಣೆ ಮಾಡಿರುವ ತಾಲ್ಲೂಕುಗಳಲ್ಲಿ ಹೊಸ ಹೋಬಳಿಗಳನ್ನು ರಚನೆ ಮಾಡಲಾಗಿದೆಯೇ;
ಆ) ಹೊಸ ಹೋಬಳಿಗಳ ರಚನೆಯಾಗದೇ ಇರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದೆಯೇ; ಸಲ್ಲಿಕೆಯಾಗಿದ್ದಲ್ಲಿ, ಯಾವಾಗ ಯಾರು ಸಲ್ಲಿಸಿರುತ್ತಾರೆ;
ಇ) ನಿಪ್ಪಾಣಿ ತಾಲ್ಲೂಕಿನಲ್ಲಿ ಯಾವ ಯಾವ ಹೋಬಳಿಗಳನ್ನು ರಚನೆ ಮಾಡಲಾಗಿದೆ; ಮಾಡದಿದ್ದಲ್ಲಿ, ಯಾವಾಗ ರಚನೆ ಮಾಡಲಾಗುವುದು; ಯಾವ ಯಾವ ಗ್ರಾಮಗಳನ್ನು ಹೋಬಳಿಗಳನ್ನಾಗಿ ಮಾಡಲಾಗುವುದು?

----

15/4/1174

## ಕೇಂದ್ರ ಸರ್ಕಾರದ ಪ್ರಮುಖ ಯೋಜನೆಗಳು

**948 ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೇಂದ್ರ ಸರ್ಕಾರದ ಪ್ರಮುಖ ಯೋಜನೆಗಳಾದ ಬೇಟಿ ಬಚಾವೋ ಬೇಟಿ ಪಡಾವೋ, ಸುಕನ್ಯಾ ಸಮೃದ್ಧಿ ಯೋಜನೆಗಳನ್ನು ರಾಜ್ಯದಲ್ಲಿ ಯಾವ ಇಲಾಖೆಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ; (ವಿವರ ನೀಡುವುದು)
ಆ) ಸದರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ;
ಇ) ಕೇಂದ್ರ ಸರ್ಕಾರದ ಈ ಯೋಜನೆಗಳನ್ನು ನಿಪ್ಪಾಣಿ ಮತಕ್ಷೇತ್ರದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆಯೇ;
ಈ) ಹಾಗಿದ್ದಲ್ಲಿ, ಕೈಗೊಂಡ ಕಾರ್ಯಕ್ರಮಗಳಾವುವು; (ನಿಪ್ಪಾಣಿ ಮತಕ್ಷೇತ್ರವಾರು ಫಲಾನುಭವಿಗಳ ವಿವರ ನೀಡುವುದು)
ಉ) ನಿಪ್ಪಾಣಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬೇಟಿ ಬಚಾವೋ ಬೇಟಿ ಪಡಾವೋ, ಸುಕನ್ಯಾ ಸಮೃದ್ಧಿ

ಯೋಜನೆಗಳ ಫಲಾನುಭವಿಗಳೆಷ್ಟು?

----

15/4/918

**ಬರಪೀಡಿತ ಪ್ರದೇಶ**

949 **ಎಸ್. ಕುಮಾರ್ ಬಂಗಾರಪ್ಪ (ಸೊರಬ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಕಳೆದ 3 ವರ್ಷಗಳಿಂದ ಹಾಗೂ ಪ್ರಸ್ತುತ ವರ್ಷ ಸೊರಬ ತಾಲ್ಲೂಕಿನಲ್ಲಿ ಮುಂಗಾರು ಮಳೆ ಸಂಪೂರ್ಣ ವಿಫಲವಾಗಿದ್ದು, ಬಿತ್ತನೆ ಕಾರ್ಯ ಕೂಡ ಆಗದಿರುವುದರಿಂದ ಸೊರಬ ತಾಲ್ಲೂಕನ್ನು ಬರಪೀಡಿತ ತಾಲ್ಲೂಕೆಂದು ಘೋಷಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

----

15/4/909

**ವಸತಿ ಸೌಲಭ್ಯ ಕಲ್ಪಿಸುವುದು**

950 **ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಿರುವ ಪ್ರದೇಶದಲ್ಲಿ ರೈತರು, ಕೂಲಿ ಕಾರ್ಮಿಕರು, ವಸತಿ ಹೀನರು ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇವರುಗಳಿಗೆ ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಸುಪ್ರಿಂಕೋರ್ಟ್ ಆದೇಶವನ್ನು ರಾಜ್ಯ ಸರ್ಕಾರ ತಪ್ಪಾಗಿ ಅರ್ಥೈಸಿಕೊಂಡಿದೆ ಎಂದು ಡೀಮ್ಡ್ ಫಾರೆಸ್ಟ್ ಕಲ್ಪನೆಯೇ ತಪ್ಪಾಗಿದೆ ಎಂದು ರಾಜ್ಯ ಉಚ್ಚನ್ಯಾಯಾಲಯ ವ್ಯಾಖ್ಯಾನಿಸಲಾಗಿದ್ದು ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

----

15/4/910

**ಆನೆ ದಾಳಿಯಿಂದ ಮೃತಪಟ್ಟವರಿಗೆ ಪರಿಹಾರ**

951 **ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಮೂರುವರ್ಷಗಳಿಂದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಮತಕ್ಷೇತ್ರದ ವ್ಯಾಪ್ತಿಯಲ್ಲಿ ನಡೆದಿರುವ ಆನೆ ದಾಳಿಯಿಂದ ಮೃತಪಟ್ಟ ಎಷ್ಟು ರೈತರ ಕುಟುಂಬಕ್ಕೆ ಪರಿಹಾರ ನೀಡಲಾಗಿದೆ;

ಆ) ಈ ಸಂಬಂಧ ಪ್ರತಿಭಟನೆ ನಡೆಸಲು ಹೋದ ಕೆಲವು ರೈತರ ವಿರುದ್ಧ ಮೊಕದ್ದಮೆ ಹೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಷ್ಟು ಮೊಕದ್ದಮೆಗಳನ್ನು ವಾಪಸ್ ಪಡೆಯಲಾಗಿದೆ? (ವಿವರ ನೀಡುವುದು)

----

15/4/911

**ಅಧಿಕಾರಿಗಳ ವರ್ಗಾವಣೆ**

952 **ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳಸ ತಾಲ್ಲೂಕು ಎಂದು ಘೋಷಣೆಯಾಗಿರುವುದರಿಂದ ತಹಶೀಲ್ದಾರ್ ಸೇರಿದಂತೆ ವಿವಿಧ ಇಲಾಖಾ ಅಧಿಕಾರಿಗಳ ವರ್ಗಾವಣೆ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು;
ಆ) ನೌಕರರ ವಸತಿ ಗೃಹಕ್ಕಾಗಿ ಕುದುರೆಮುಖದಲ್ಲಿ ಕಂಪನಿಯಿಂದ ತೆರವಾದ ವಸತಿ ಗೃಹಗಳನ್ನು ಕಳಸ ತಾಲ್ಲೂಕಿನ ನೌಕರರಿಗೆ ಕಾಯ್ದಿರಿಸಲು ಸರ್ಕಾರ ಸಿದ್ಧವಿದೆಯೇ;
ಇ) ಕುದುರೆಮುಖ ಪಟ್ಟಣ ವ್ಯಾಪ್ತಿಯ ಪ್ರದೇಶ ಕಂದಾಯ ಇಲಾಖೆಗೆ ಒಳಪಟ್ಟಿದೆಯೇ ಅಥವಾ ಅರಣ್ಯ ಇಲಾಖೆಗೆ ಒಳಪಟ್ಟಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು)

----

15/4/1182

**ದೇವಸ್ಥಾನಗಳ ಸಮಿತಿ ರಚನೆ**

953 **ಜೆ.ಸಿ. ಮಾಧು ಸ್ವಾಮಿ (ಚಿಕ್ಕನಾಯಕನಹಳ್ಳಿ):**

ಮಾನ್ಯ **ಕಂದಾಯ ಇಲಾಖೆಯಿಂದ ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಮುಜರಾಯಿ ಇಲಾಖೆಯಲ್ಲಿ ದೇವಸ್ಥಾನಗಳ ಧರ್ಮದರ್ಶಿ ಸಮಿತಿಗಳು ಅಸ್ತಿತ್ವದಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ದೇವಸ್ಥಾನದ ಉಸ್ತುವಾರಿಗೆ ಧಕ್ಕೆಯಾಗುತ್ತಿರುವುದರಿಂದ ಸಮಿತಿಯನ್ನು ರಚಿಸಲು ಸರ್ಕಾರ ಕೈಗೊಂಡ ಕ್ರಮವೇನು?

----

15/4/1401

**ಮುಜರಾಯಿ ದೇವಸ್ಥಾನಗಳ ದುರಸ್ಥಿ**

954 **ಕೆ. ಮಹದೇವ (ಪಿರಿಯಾಪಟ್ಟಣ):**

ಮಾನ್ಯ **ಕಂದಾಯ ಇಲಾಖೆಯಿಂದ ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಪಿರಿಯಾಟ್ಟಣ ಮತಕ್ಷೇತ್ರದಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ದೇವಸ್ಥಾನಗಳು ಯಾವುವು; ಈ ಕ್ಷೇತ್ರದ ವ್ಯಾಪ್ತಿಯ ಎಷ್ಟು ಮುಜರಾಯಿ ದೇವಸ್ಥಾನಗಳು ಶಿಥಿಲಗೊಂಡಿವೆ; (ವಿವರ ನೀಡುವುದು)
ಆ) ಶಿಥಿಲವಾಗಿರುವ ದೇವಸ್ಥಾನಗಳ ದುರಸ್ಥಿಗಾಗಿ ಹಾಗೂ ಜೀರ್ಣೋದ್ಧಾರಕ್ಕೆ ಎಷ್ಟು ಅನುದಾನ

ಬೇಕಾಗಬಹುದು;

ಇ) ಈ ಮತ ಕ್ಷೇತ್ರದ ದೇವಸ್ಥಾನಗಳ ದುರಸ್ಥಿಗಾಗಿ ಹಾಗೂ ಜೀರ್ಣೋದ್ಧಾರಕ್ಕೆ ಸರ್ಕಾರ ಎಷ್ಟು ಅನುದಾನವನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳುವುದು?

----

15/4/925

**ಕ್ರೀಡಾಂಗಣ ನಿರ್ಮಾಣ**

**955 ಮಹದೇವಪ್ಪ ಶಿವಲಿಂಗಪ್ಪ ಯಡವಾಡ್ (ರಾಮದುರ್ಗ):**

ಮಾನ್ಯ **ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ **: -**

ಅ) ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನಲ್ಲಿ ಕ್ರೀಡಾಂಗಣವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತದೆ; (ವಿವರ ನೀಡುವುದು)

ಇ) ರಾಮದುರ್ಗ ಪಟ್ಟಣದಲ್ಲಿ ಕರ್ನಾಟಕ ಗೃಹ ಮಂಡಳಿಗೆ ಸೇರಿದ 24 ಎಕರೆ ಖಾಲಿ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಇರುವ ತೊಂದರೆಗಳೇನು;

ಈ) 2019-20 ನೇ ಸಾಲಿನಲ್ಲಿ ರಾಮದುರ್ಗ ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು? (ವಿವರ ನೀಡುವುದು);

----

15/4/1189

**ನಿರ್ಮಿತಿ ಕೇಂದ್ರದ ಕಾಮಗಾರಿಗಳು**

**956 ಜಯರಾಮ್ ಎ.ಎಸ್. (ತುರುವೇಕೆರೆ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ **: -**

ಅ) ನಿರ್ಮಿತಿ ಕೇಂದ್ರ ತುಮಕೂರು ಸಂಸ್ಥೆ ಮುಖಾಂತರ ತುರುವೇಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು (ಸಂಪೂರ್ಣ ವಿವರ ನೀಡುವುದು);

ಆ) ಪ್ರಸ್ತುತ ಕಾಮಗಾರಿಗಳು ಯಾವ ಹಂತದಲ್ಲಿವೆ; ವಿಳಂಬವಾಗಲು ಕಾರಣವೇನು; ಬಿಡುಗಡೆಯಾಗಿರುವ ಅನುದಾನವೆಷ್ಟು; ಖರ್ಚಾಗಿರುವ ಅನುದಾನವೆಷ್ಟು (ಇಲಾಖಾವಾರು ಮಾಹಿತಿ ನೀಡುವುದು);

ಇ) ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಸ್ತುತ ಮೂರು ವರ್ಷಗಳಿಂದ ಕೈಗೊಂಡಿರುವ ಕಾಮಗಾರಿಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳದಿರುವುದು ಮತ್ತು ಅತೀ ಕಳಪೆಯಾಗಿದ್ದು, ಸಾರ್ವಜನಿಕರಿಂದ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಕಳಪೆಯಾದ ಕಾಮಗಾರಿಗಳ ಬಗ್ಗೆ ಸರ್ಕಾರ ಸಂಪೂರ್ಣ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕೈಗೊಂಡ ಕ್ರಮಗಳೇನು?

----

15/4/1190

## ಅರಣ್ಯ ಜಮೀನು

**957 ಜಯರಾಮ್ ಎ.ಎಸ್. (ತುರುವೇಕೆರೆ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ತುರುವೇಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಲಭ್ಯವಿರುವ ಮೀಸಲು ಅರಣ್ಯ ಅಥವಾ ವನ್ಯಜೀವಿ ಅರಣ್ಯ ಪ್ರದೇಶಗಳಾವುವು (ವಿಸ್ತೀರ್ಣ ಸರ್ವೆ ನಂಬರ್ ಸಮೇತ ವಿವರ ನೀಡುವುದು);
ಆ) ಕಳೆದ 2 ವರ್ಷಗಳಿಂದ ಅರಣ್ಯ ಪ್ರದೇಶದಲ್ಲಿ ವನವಿಕಾಸ ಯೋಜನೆಯಡಿ ಯಾವ ಯಾವ ವಿಧದ ಸಸ್ಯಗಳನ್ನು ನೆಡಲಾಗಿದೆ; ಅದಕ್ಕೆ ತಗುಲಿದ ವೆಚ್ಚವೆಷ್ಟು
ಇ) ಸಸ್ಯಗಳನ್ನು ಸಮರ್ಪಕವಾಗಿ ಬೆಳೆಸಲು ಇಲಾಖೆಯಿಂದ ಕೈಗೊಂಡಿರುವ ಕ್ರಮಗಳೇನು ಹಾಗೂ ಮಾನದಂಡಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

----

15/4/1192

## ಗೋಮಾಳ ಗೋಕಟ್ಟೆ ಸರ್ಕಾರಿ ಜಮೀನು

**958 ಜಯರಾಮ್ ಎ.ಎಸ್. (ತುರುವೇಕೆರೆ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ತುರುವೇಕೆರೆ ವಿಧಾನಸಭಾ ವ್ಯಾಪ್ತಿಯಲ್ಲಿ ಇರುವ ಗೋಮಾಳ, ಗೋಕಟ್ಟೆ ಹಾಗೂ ಇತರೆ ಸರ್ಕಾರಿ ಜಮೀನುಗಳ ಸಂಖ್ಯೆ ಎಷ್ಟು (ಸಂಪೂರ್ಣ ವಿವರವನ್ನು ಸರ್ವೆ ನಂಬರ್ ಸಹಿತ ಹೋಬಳಿವಾರು ಸೂಕ್ತ ದಾಖಲೆಗಳೊಂದಿಗೆ ನೀಡುವುದು);
ಆ) ಈ ಗೋಮಾಳ, ಗೋಕಟ್ಟೆ ಹಾಗೂ ಇನ್ನಿತರೆ ಸರ್ಕಾರಿ ಜಮೀನುಗಳನ್ನು ಅತಿಕ್ರಮಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಕರಣಗಳನ್ನು ಗುರುತಿಸಲಾಗಿದೆ (ಪ್ರಕರಣವಾರು ಸಂಪೂರ್ಣ ವಿವರ ನೀಡುವುದು);
ಇ) ಅತಿಕ್ರಮಣ ಮಾಡಿರುವ ಪ್ರಕರಣಗಳನ್ನು ನಿಯಮಾನುಸಾರ ಸಕ್ರಮಗೊಳಿಸಲಾಗಿದೆಯೇ; ಹಾಗಿದ್ದಲ್ಲಿ, ಸಕ್ರಮಗೊಳಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು (ವಿವರ ನೀಡುವುದು);
ಈ) ಸಕ್ರಮಗೊಳಿಸದೇ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಬಾಕಿ ಉಳಿಯಲು ಕಾರಣಗಳೇನು? (ವಿವರ ನೀಡುವುದು)

----

15/4/1193

## ಕಟ್ಟಡ ಕಾರ್ಮಿಕರು

**959 ಜಯರಾಮ್ ಎ.ಎಸ್. (ತುರುವೇಕೆರೆ):**

ಮಾನ್ಯ **ಕಾರ್ಮಿಕ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ತುರುವೇಕೆರೆ ವಿಧಾನಸಭಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಈವರೆವಿಗೂ ನೋಂದಾಯಿಸಲ್ಪಟ್ಟ ಕಟ್ಟಡ ಕಾರ್ಮಿಕರ ಸಂಖ್ಯೆ ಎಷ್ಟು (ಹೆಸರು ಸಹಿತ ಸಂಪೂರ್ಣ ವಿವರ ನೀಡುವುದು);

ಆ) ನೋಂದಾಯಿತ ಕಾರ್ಮಿಕರಿಗೆ ಸರ್ಕಾರದ ವಿವಿಧ ಯೋಜನೆಗಳಡಿಯಲ್ಲಿ ಯಾವ ಯಾವ ಸೌಲಭ್ಯಗಳು ದೊರಕುತ್ತಿವೆ;
ಇ) ಕಳೆದ ಮೂರು ವರ್ಷಗಳಲ್ಲಿ ಫಲಾನುಭವಿಗಳಿಗೆ ನೀಡಲಾಗಿರುವ ಸೌಲಭ್ಯಗಳು ಯಾವುವು (ಯೋಜನಾವಾರು ವಿವರ ನೀಡುವುದು);
ಈ) ವಿವಿಧ ಯೋಜನೆಯಡಿಯಲ್ಲಿ ವಿಲೇವಾರಿಯಾದ ಅರ್ಜಿಗಳ ಸಂಖ್ಯೆ ಎಷ್ಟು; ಬಾಕಿ ಉಳಿದ ಅರ್ಜಿಗಳ ಸಂಖ್ಯೆ ಎಷ್ಟು; ಬಾಕಿ ಉಳಿಯಲು ಕಾರಣಗಳೇನು?

----

15/4/1194

**ಇ.ಎಸ್.ಐ. ಆಸ್ಪತ್ರೆಗಳ ಅಭಿವೃದ್ಧಿ**

960 **ಎಲ್. ನಾಗೇಂದ್ರ (ಚಾಮರಾಜ):**

ಮಾನ್ಯ **ಕಾರ್ಮಿಕ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಮೈಸೂರು ನಗರದಲ್ಲಿ ಲೋಕಾರ್ಪಣೆಯಾಗಿರುವ ಇ.ಎಸ್.ಐ ಆಸ್ಪತ್ರೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ವತಿಯಿಂದ ಪ್ರತ್ಯೇಕವಾಗಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ (ವಿವರ ಒದಗಿಸುವುದು);
ಆ) ಪ್ರಸ್ತುತ ಆಸ್ಪತ್ರೆಯಲ್ಲಿ ಎಲ್ಲಾ ವಿಧದ ರೋಗಗಳಿಗೆ ಚಿಕಿತ್ಸೆ ಲಭ್ಯವಾಗುತ್ತಿದೆಯೇ; ಆಸ್ಪತ್ರೆಯಲ್ಲಿ ಔಷಧಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮೂಲಭೂತ ಸೌಕರ್ಯಗಳ ಕೊರತೆ ಇರುವುದಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ;
ಇ) ಈ ಆಸ್ಪತ್ರೆಯಲ್ಲಿ ಡಯಾಲಿಸೀಸ್ ಕೇಂದ್ರ ಲಭ್ಯವಿದೆಯೇ; ಇದ್ದಲ್ಲಿ, ಒಂದು ಬಾರಿ ಡಯಾಲಿಸೀಸ್ ಮಾಡಲು ಎಷ್ಟು ಶುಲ್ಕ ವಿಧಿಸಲಾಗುವುದು; ಡಯಾಲಿಸೀಸ್‌ಗಾಗಿ ರೋಗಿಗಳೆ ಡಯಾಲೈಸರ್‌ಗಳನ್ನು ತರಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಈ) ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಅನುಗುಣವಾಗಿ ವೈದ್ಯರು, ನರ್ಸ್‌ಗಳು ಮತ್ತು ತಾಂತ್ರಿಕ ತಜ್ಞರು ಇದ್ದಾರೆಯೇ (ವೃಂದದ ಸಂಖ್ಯಾವಾರು ವಿವರ ಒದಗಿಸುವುದು);
ಉ) ಚಿಕಿತ್ಸೆ ನೀಡುವಲ್ಲಿ ಕೇಂದ್ರ ಸರ್ಕಾರದ ನೌಕರರಿಗೆ ಹಾಗೂ ರಾಜ್ಯ ಸರ್ಕಾರದ ನೌಕರರಿಗೆತಾರತಮ್ಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು?

----

15/4/1177

**ಪಿಂಚಣಿ ಮಂಜೂರಾತಿ**

961 **ಬಿ. ನಾರಾಯಣ್‌ರಾವ್ (ಬಸವಕಲ್ಯಾಣ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ ಮೂರು ವರ್ಷಗಳಿಂದ ಬೀದರ್ ಜಿಲ್ಲೆಯ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಯೋಜನೆಯಡಿ ಪಿಂಚಣಿ ಕೋರಿ ಬಂದಿರುವ ಅರ್ಜಿಗಳೆಷ್ಟು; ಈ ಪೈಕಿ ಎಷ್ಟು ಫಲಾನುಭವಿಗಳಿಗೆ ಪಿಂಚಣಿ ಮಂಜೂರು ಮಾಡಲಾಗಿದೆ; (ವರ್ಷವಾರು ಫಲಾನುಭವಿಗಳವಾರು ಸಂಪೂರ್ಣ ಮಾಹಿತಿ ನೀಡುವುದು)
ಆ) 201819ನೇ ಸಾಲಿನಲ್ಲಿ ಪಿಂಚಣಿ ಮಂಜೂರಾತಿಗಾಗಿ ಫಲಾನುಭವಿಗಳಿಂದ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು)

ಇ) ಸ್ವೀಕೃತವಾದ ಅರ್ಜಿಗಳು ಬಾಕಿ ಉಳಿಯಲು ಕಾರಣವೇನು; ಬಾಕಿ ಉಳಿದಿರುವ ಅರ್ಜಿಗಳನ್ನು ಯಾವ ಕಾಲಮಿತಿಯೊಳಗೆ ವಿಲೇ ಮಾಡಲಾಗುವುದು?

----

15/4/269

**ಅಂಗನವಾಡಿ ಕಾರ್ಯಕರ್ತೆಯರು**

**962 ಸಿ.ಎಂ.ನಿಂಬಣ್ಣನವರ್ (ಕಲಘಟಗಿ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಂದಾಯ ಇಲಾಖೆಯ ವಿವಿಧ ಸರ್ವೆಗಳಲ್ಲಿ ಮತ್ತು ವರ್ಷದಾದ್ಯಂತ ಚುನಾವಣೆ ಗುರುತಿನ ಚೀಟಿ ಮಾಡಲು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮತ್ತು ತೆಗೆಯಲು ಅಂಗನವಾಡಿ ಕಾರ್ಯಕರ್ತರನ್ನು ಬಿ.ಎಲ್.ಓ ಕಾರ್ಯಕ್ಕೆ ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಅಂಗನವಾಡಿ ಕಾರ್ಯಕರ್ತೆಯರಿಗೆ ಬೇರೆ ಇಲಾಖೆಗಳಿಂದ ಕಾರ್ಯದ ಒತ್ತಡ ಹೇರದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಆದ್ದೇಶವಿದ್ದರೂ ಅವರನ್ನು ಈ ಕಾರ್ಯಗಳಿಗೆ ಬಳಸಿಕೊಳ್ಳುವುದು ಅವೈಜ್ಞಾನಿಕವಾಗಿದ್ದು ಇದು ಸರ್ಕಾರದ ಗಮನಕ್ಕಿದೆಯೇ;

ಇ) ಹಾಗಿದ್ದಲ್ಲಿ ಈ ಕಾರ್ಯಗಳಿಂದ ಅಂಗನವಾಡಿ ಕಾರ್ಯಕರ್ತೆಯರನ್ನು ಮುಕ್ತಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ಬಿ.ಎಲ್.ಓ ಕಾರ್ಯಕ್ಕೆ ಆಯಾ ಗ್ರಾಮಗಳಲ್ಲಿರುವ ವಿದ್ಯಾವಂತ ನಿರುದ್ಯೋಗ ಯುವಕ, ಯುವತಿಯರನ್ನು ಗೌರವಧನದ ಆಧಾರದ ಮೇಲೆ ನೇಮಿಸಿಕೊಳ್ಳಲು ಎದುರಾಗುವ ಸಮಸ್ಯೆಗಳೇನು; ಇವರನ್ನು ನೇಮಿಸಿಕೊಳ್ಳಲು ಯಾವ ಕ್ರಮ ಅನುಸರಿಸಲಾಗುವುದು?(ಮಾಹಿತಿ ನೀಡುವುದು)

----

15/4/1184

**ಪೋಡಿ ಮುಕ್ತ ಗ್ರಾಮ**

**963 ಸಿ. ಎಸ್. ನಿರಂಜನ್ ಕುಮಾರ್ (ಗುಂಡ್ಲುಪೇಟೆ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಪೋಡಿ ಮುಕ್ತ ಗ್ರಾಮ, ಪೋಡಿ ಮುಕ್ತ ಪಂಚಾಯಿತಿ, ಪೋಡಿ ಮುಕ್ತ ತಾಲ್ಲೂಕು ಹೀಗೆ ಯಾವುದು ಮುಕ್ತಾಯವಾಗದಿರುವ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸರ್ಕಾರದ ಇಂತಹ ಘೋಷಣೆಗಳು ಅನುಷ್ಠಾನವಾಗುವುದು ಅಥವಾ ಸಂಪೂರ್ಣವಾಗುವುದು ಯಾವಾಗ;

ಆ) ಪೋಡಿ ಮುಕ್ತ ದುರಸ್ತಿಯಾಗಿರುವುದು/ಆಗದಿರುವುದು ಎಷ್ಟು (ವಿವರ ನೀಡುವುದು);

ಇ) ಯಾವ ಕಾಲಮಿತಿಯೊಳಗೆ ಈ ಸಮಸ್ಯೆಗೆ ಪರಿಹಾರ ದೊರಕುತ್ತದೆ? (ಸಂಪೂರ್ಣ ವಿವರ ನೀಡುವುದು)

----

15/4/1185

**ರೈಲ್ವೆ ಕಂಬಿಗಳನ್ನು ಅಳವಡಿಸುವಿಕೆ**

964 ಸಿ. ಎಸ್. ನಿರಂಜನ್ ಕುಮಾರ್ (ಗುಂಡ್ಲುಪೇಟೆ):

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಕಾಡಾನೆಗಳ ಹಾವಳಿಯಿಂದ ಸಾರ್ವಜನಿಕರ ಪ್ರಾಣಹಾನಿ ಹಾಗೂ ಬೆಳೆಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಾಡಾನೆಗಳ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;
ಆ) ಕಳೆದ ಮೂರು ವರ್ಷಗಳಿಂದ ಕಾಡಾನೆಗಳ ಹಾವಳಿಯಿಂದ ಮೃತಪಟ್ಟ ಸಾರ್ವಜನಿಕರಿಗೆ ಹಾಗೂ ಬೆಳೆಹಾನಿಗೆ ಸರ್ಕಾರದಿಂದ ಎಷ್ಟು ಪರಿಹಾರ ಮಂಜೂರಾಗಿದೆ (ಸಂಪೂರ್ಣ ಮಾಹಿತಿ ಒದಗಿಸುವುದು);
ಇ) ಗುಂಡ್ಲುಪೇಟೆ ತಾಲ್ಲೂಕಿನ ಕಾಡಂಚಿನಲ್ಲಿರುವ ಗ್ರಾಮಗಳನ್ನು ಕಾಡಾನೆಗಳ ಹಾವಳಿಯಿಂದ ರಕ್ಷಿಸಲು ಗ್ರಾಮಗಳ ರೈಲ್ವೆ ಕಂಬಿಗಳನ್ನು ಅಳವಡಿಸುವ ಬಗ್ಗೆ ಸರ್ಕಾರ ಚಿಂತಿಸಿದೆಯೇ (ಗ್ರಾಮವಾರು ವಿವರ ಒದಗಿಸುವುದು);
ಈ) ಕಾಡಾನೆಗಳ ಹಾವಳಿಯನ್ನು ತಡೆಗಟ್ಟಲು ರೈಲ್ವೆ ಕಂಬಿಗಳನ್ನು ಅಳವಡಿಸುವ ಬಗ್ಗೆ ಸರ್ಕಾರದ ನಿಲುವೇನು; ಇದಕ್ಕಾಗಿ ಸರ್ಕಾರ ಎಷ್ಟು ಅನುದಾನವನ್ನು ಮೀಸಲಿಟ್ಟಿದೆ;
ಉ) ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಕಾಡಾನೆಗಳ ಹಾವಳಿ ಇರುವ ಪ್ರದೇಶಗಳಲ್ಲಿ ರೈಲ್ವೆ ಕಂಬಿಗಳನ್ನು ಯಾವ ಕಾಲಮಿತಿಯೊಳಗೆಅಳವಡಿಸಲಾಗುವುದು? (ವಿವರ ನೀಡುವುದು)

----

15/4/1186

## ಸಾಮಾಜಿಕ ಭದ್ರತಾ ಯೋಜನೆಗಳು

965 ಸಿ. ಎಸ್. ನಿರಂಜನ್ ಕುಮಾರ್ (ಗುಂಡ್ಲುಪೇಟೆ):

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕಳೆದ ಐದಾರು ತಿಂಗಳುಗಳಿಂದ ಸಾಮಾಜಿಕ ಭದ್ರತಾ ಯೋಜನೆಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವಿಧವಾ ವೇತನ, ವೃದ್ಧಾಪ್ಯಾ ವೇತನಗಳು ಬರದೇ ನೂರಾರು ಬಡ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಇಂತಹ ಎಷ್ಟು ಪ್ರಕರಣಗಳಿವೆ;
ಇ) ಹಲವಾರು ವರ್ಷಗಳಿಂದ ಪಿಂಚಣಿ ಪಡೆಯುತ್ತಿದ್ದವರಿಗೆ ಈ ರೀತಿ ವಿಳಂಬವಾಗಲು ಕಾರಣಗಳೇನು;
ಈ) ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? (ವಿವರ ಒದಗಿಸುವುದು)

----

15/4/1187

## ಅಂಗನವಾಡಿಗಳ ದುರಸ್ತಿ

966 ಸಿ. ಎಸ್. ನಿರಂಜನ್ ಕುಮಾರ್ (ಗುಂಡ್ಲುಪೇಟೆ):

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು

ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಎಷ್ಟು ಅಂಗನವಾಡಿ ಕಟ್ಟಡಗಳು ದುರಸ್ತಿಯಲ್ಲಿವೆ (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರ ನೀಡುವುದು);
ಆ) ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಅಂಗನವಾಡಿ ಕಟ್ಟಡಗಳು ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಇ) ಬಂದಿದ್ದರೆ, ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಎಷ್ಟು ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು);
ಈ) ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಎಷ್ಟು ಅಂಗನವಾಡಿಗಳಿಗೆ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ಅನುಮೋದನೆ ನೀಡಲಾಗಿದೆ ಹಾಗೂ ಅದಕ್ಕಾಗಿ ಕೈಗೊಂಡಿರುವ ಕ್ರಮಗಳೇನು?

----

**15/4/207**

**ಕ್ರೀಡಾ ಇಲಾಖೆಯ ಚಟುವಟಿಕೆ.**

**967 ನಿಸರ್ಗನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ):**

ಮಾನ್ಯ **ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಮೂರು ವರ್ಷಗಳಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಬಿಡುಗಡೆಯಾದ ಅನುದಾನವೆಷ್ಟು; (ವಿವರ ನೀಡುವುದು)
ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬಿಡುಗಡೆ ಯಾದ ಅನುದಾನವೆಷ್ಟು; ಈ ಅನುದಾನವನ್ನು ಯಾವ ಯಾವ ಕ್ರೀಡಾ ಚಟುವಟಿಕೆ ಮತ್ತು ಅಭಿವೃದ್ಧಿಗಾಗಿ ಬಳಸಲಾಗಿದೆ; (ವಿವರ ನೀಡುವುದು)
ಇ) ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಖರ್ಚು ಮಾಡಿರುವ ಅನುದಾನವೆಷ್ಟು? (ಪೂರ್ಣ ಮಾಹಿತಿ ಒದಗಿಸುವುದು)

----

**15/4/878**

**ಯೋಜನೆಗಳ ಪ್ರಚಾರ**

**968 ನಿಸರ್ಗನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಅರಣ್ಯ ಇಲಾಖೆಯಲ್ಲಿರುವ ಕೇಂದ್ರ ರಾಜ್ಯ ಸರ್ಕಾರದ ವಿವಿದ ಯೋಜನೆಗಳು ಯಾವುವು; ಸದರಿ ಯೋಜನೆಗಳು ಪಡೆಯಲು ಇರುವ ಅರ್ಹತೆಗಳೇನು; (ವಿವರ ನೀಡುವುದು)
ಆ) ಈ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ / ರೈತರಿಗೆ ಸರಿಯಾಗಿ ಮಾಹಿತಿ / ಪ್ರಚಾರ ನೀಡಲಾಗುತ್ತಿದೆಯೇ; (ವಿವರ ನೀಡುವುದು)
ಇ) ಹಾಗಿದಲ್ಲಿ ಈ ನಿಟ್ಟಿನಲ್ಲಿ ಸರ್ಕಾರಥ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? (ವಿವರ ನೀಡುವುದು)

----

**15/4/1188**

## ರುದ್ರಭೂಮಿಗಳು

969 **ಚಂದ್ರಕಾಂತಗೌಡ ಚನ್ನಬಸಪ್ಪಗೌಡ ಪಾಟೀಲ್ (ನರಗುಂದ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಗದಗ ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ರುದ್ರಭೂಮಿ ಇಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಜಿಲ್ಲೆಯ ಒಟ್ಟು ಎಷ್ಟು ಪ್ರದೇಶಗಳಲ್ಲಿ ರುದ್ರಭೂಮಿ ಇಲ್ಲದಿರುವುದು ಕಂಡುಬಂದಿದೆ; ಅವುಗಳಲ್ಲಿ ಯಾವುಗಳಾವುವು (ಗ್ರಾಮವಾರು ವಿವರ ನೀಡುವುದು);
ಇ) ರುದ್ರಭೂಮಿಗಾಗಿ ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ, ಸರ್ಕಾರ ಕೈಗೊಳ್ಳುವ ಕ್ರಮಗಳೇನು; ಖಾಸಗಿ ಮಾಲೀಕತ್ವದ ಜಮೀನುಗಳನ್ನು ರುದ್ರಭೂಮಿ ಸಲುವಾಗಿ ಖರೀದಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;
ಈ) ಈವರೆಗೆ ಗದಗ ಜಿಲ್ಲೆಯ ಯಾವ ಯಾವ ಗ್ರಾಮಗಳಲ್ಲಿ ರುದ್ರಭೂಮಿಯ ಅವಶ್ಯಕತೆ ಇರುವುದಾಗಿ ಸರ್ಕಾರಕ್ಕೆ ಪ್ರಸ್ತಾವನೆಗಳು ಬಂದಿವೆ; (ಸಂಪೂರ್ಣ ವಿವರ ನೀಡುವುದು)
ಉ) ರುದ್ರಭೂಮಿ ಅವಶ್ಯಕತೆ ಇರುವ ಗ್ರಾಮಗಳಲ್ಲಿ ಜಮೀನು ಖರೀದಿಸುವ ಸಲುವಾಗಿ ಈವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಇಲ್ಲವಾದಲ್ಲಿ, ಯಾವ ಕಾಲಮಿತಿಯೊಳಗೆ ಅನುದಾನ ಬಿಡುಗಡೆ ಮಾಡಲಾಗುವುದು (ವಿವರ ನೀಡುವುದು)?

----

15/4/1178

## ಪರಶುರಾಂಪುರ ತಾಲ್ಲೂಕು ಘೋಷಣೆ

970 **ಟಿ ರಘುಮೂರ್ತಿ (ಚಳ್ಳಕೆರೆ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಪರಶುರಾಂಪುರ ಹೋಬಳಿ ಕೇಂದ್ರವನ್ನು ಹೊಸ ತಾಲ್ಲೂಕನ್ನಾಗಿ ಘೋಷಣೆ ಮಾಡಲು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, ಈ ಹಿಂದೆ ಪರಶುರಾಂಪುರವನ್ನು ಹೊಸ ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವುದಾಗಿ ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)
ಇ) ಡಾ: ಎಂ.ಬಿ. ಪ್ರಕಾಶ್ ಸಮಿತಿಯು ಪರಶುರಾಂಪುರವನ್ನು ತಾಲ್ಲೂಕನ್ನಾಗಿ ಘೋಷಣೆ ಮಾಡಲು ಶಿಫಾರಸ್ಸು ಮಾಡಿದ್ದರೂ ಘೋಷಣೆ ಮಾಡದಿರಲು ಕಾರಣವೇನು;
ಈ) ಚಿತ್ರದುರ್ಗ ಜಿಲ್ಲೆಯಲ್ಲಿ ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು ತಾಲ್ಲೂಕುಗಳನ್ನು ಸೇರಿಸಿ ಆಡಳಿತದ ಹಿತದೃಷ್ಟಿಯಿಂದ ಚಳ್ಳಕೆರೆಯಲ್ಲಿ ಉಪವಿಭಾಗಾಧಿಕಾರಿ ಕಛೇರಿ ಪ್ರಾರಂಭಿಸುವ ಪ್ರಸ್ತಾವನೆಯನ್ನು ಈವರೆಗೆ ಅನುಷ್ಠಾನಗೊಳಿಸದಿರುವುದಕ್ಕೆ ಕಾರಣವೇನು ಮತ್ತು ಈ ಸಂಬಂಧ ಸರ್ಕಾರ ಯಾವ ಕ್ರಮಕೈಗೊಳ್ಳಲಾಗುವುದು? (ವಿವರಣೆ ನೀಡುವುದು)

----

15/4/1179

## ಕ್ರೀಡಾಂಗಣ ಅಭಿವೃದ್ಧಿಗೆ ಹಣ ಬಿಡುಗಡೆ

**971 ಟಿ ರಘುಮೂರ್ತಿ (ಚಳ್ಳಕೆರೆ):**

ಮಾನ್ಯ **ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯಲ್ಲಿ ಹಾಲಿ ಇರುವ ಹಳೆಯ ಕ್ರೀಡಾಂಗಣ ಅಭಿವೃದ್ಧಿಗೆ ರೂ.190.68 ಲಕ್ಷಗಳ ಅನುಮೋದನೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ, 201819ನೇ ಸಾಲಿನಲ್ಲಿ ಕ್ರೀಡಾಂಗಣ ಅಭಿವೃದ್ಧಿ ಪಡಿಸಲು ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ಕೈಗೊಳ್ಳುವ ಕ್ರಮವೇನು;
ಇ) ಚಳ್ಳಕೆರೆ ತಾಲ್ಲೂಕಿನಲ್ಲಿ ಕೇಂದ್ರ ಸರ್ಕಾರದ DRDO, BAARK, ICC ಯಂತಹ ವಿಜ್ಞಾನ ಸಂಸ್ಥೆಗಳಿರುವುದರಿಂದ ಸುಸಜ್ಜಿತವಾದ ಹೊಸ ಕ್ರೀಡಾಂಗಣ ನಿರ್ಮಿಸಲು ಅನುಮೋದನೆ ನೀಡಿ, ರೂ.50 ಲಕ್ಷ ಬಿಡುಗಡೆ ಮಾಡಿ ಕಾಮಗಾರಿ ಪ್ರಾರಂಭ ಮಾಡಿದ್ದು, ಉಳಿದ ಹಣವನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು;
ಈ) ಈ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನಿಡುವುದು)

----

**15/4/383**

## ಟೆನಿಸ್ ತರಬೇತಿದಾರರ ನೇಮಕ

**972 ಕೆ. ರಘುಪತಿ ಭಟ್ (ಉಡುಪಿ):**

ಮಾನ್ಯ **ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಉಡುಪಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಲಾಗಿರುವ ಒಳಾಂಗಣ ಟೆನಿಸ್ ಕ್ರೀಡಾಂಗಣದಲ್ಲಿ ತರಬೇತಿದಾರರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ;
ಆ) ತರಬೇತಿದಾರರನ್ನು ಯಾವಾಗ ನೇಮಕ ಮಾಡಲಾಗುವುದು?

----

**15/4/422**

## ಅರಣ್ಯ ಭೂಮಿ

**973 ರಾಜೇಶ್ ನಾಯಕ್ ಯು. (ಬಂಟ್ವಾಳ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬಂಟ್ವಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಅರಣ್ಯ ಭೂಮಿ ಎಷ್ಟು; (ಸರ್ವೆ ನಂಬರ್ ಸಹಿತ ಗ್ರಾಮ ವಾರು ವರದಿ ನೀಡುವುದು)
ಆ) ಅರಣ್ಯ ಭೂಮಿಯನ್ನು ಸಾರ್ವಜನಿಕ ಉದ್ದೇಶಕ್ಕೆ ನೀಡಲು ಇರುವ ಮಾನದಂಡಗಳೇನು?

----

**15/4/914**

**ವಿಕಲಚೇತನ ಯೋಜನೆಯ ಸೌಲಭ್ಯ**

974 **ರಾಜ್‌ಕುಮಾರ್ ಪಾಟೀಲ್ (ಸೇಡಂ ):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಸೇಡಂ ವಿಧಾಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಲ್ಲಿ ವಿಕಲಚೇತನ ಯೋಜನೆಯಡಿ ಜಾರಿಗೊಳಿಸಿರುವ ಕಾರ್ಯಕ್ರಮಗಳಾವುವು; ಒಟ್ಟು ಎಷ್ಟು ಫಲಾನುಭವಿಗಳಿಗೆ ಈ ಯೋಜನೆಯಿಂದ ಸೌಲಭ್ಯಗಳು ಮಂಜೂರಾಗಿವೆ; (ಅಂಕಿ ಅಂಶಗಳ ವಿವರ ನೀಡುವುದು)

ಆ) ಈ ಯೋಜನೆಯಡಿ ಎಷ್ಟು ಪ್ರಕರಣಗಳು ಬಾಕಿ ಉಳಿದಿವೆ; ಬಾಕಿ ಉಳಿಯಲು ಕಾರಣಗಳೇನು

ಇ) ವಿಕಲಚೇತನ ಯೋಜನೆಯಡಿ ಸೌಲಭ್ಯಗಳನ್ನು ಪಡೆಯಲು ಇರುವ ಮಾನದಂಡಗಳೇನು?

\- - - -

15/4/900

**ಸಿಬ್ಬಂದಿಗಳ ಸಂಖ್ಯೆ ಕುರಿತು**

975 **ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಚಿಕ್ಕಮಗಳೂರು ಜಿಲ್ಲೆಯ ಉಪನೋಂದಣಾಧಿಕಾರಿಗಳ ಕಛೇರಿಯ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆಯೆಷ್ಟು; (ಕಛೇರಿವಾರು ವಿವರ ಒದಗಿಸುವುದು)

ಆ) ಅದರಲ್ಲಿ ಖಾಯಂ ಹಾಗೂ ತಾತ್ಕಾಲಿಕ ಸಿಬ್ಬಂದಿಗಳ ಸಂಖ್ಯೆಯೆಷ್ಟು; (ಕಛೇರಿವಾರು ವಿವರ ಒದಗಿಸುವುದು)

ಇ) ಚಿಕ್ಕಮಗಳೂರು ಹಿರಿಯ ಉಪನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ಸಂಖ್ಯೆಯೆಷ್ಟು; ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಇವರನ್ನು ಯಾವ ಮಾನದಂಡದ ಆಧಾರದಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ;

ಈ) ಈ ಸಿಬ್ಬಂದಿಗಳಿಗೆ ಇರಬೇಕಾದ ವಿದ್ಯಾರ್ಹತೆಯೇನು; ಯಾವ ಮಾನವ ಸಂಪನ್ಮೂಲ ಏಜೆನ್ಸಿ ಮೂಲಕ ಈ ತಾತ್ಕಾಲಿಕ ನೌಕರರನ್ನು ನೇಮಿಸಿಕೊಳ್ಳಲಾಗಿದೆ;

ಉ) ಈ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಲು ತಾತ್ಕಲಿಕ ಸಿಬ್ಬಂದಿಗಳ ತರಬೇತಿ ನೀಡಲಾಗಿದೆಯೆ; (ವಿವರ ಒದಗಿಸುವುದು)

\- - - -

15/4/901

**ಜಮೀನು ಮಂಜೂರಾತಿ**

976 **ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು**

ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ವಸತಿರಹಿತರಿಗೆ ನಿವೇಶನಕ್ಕಾಗಿ, ಗ್ರಾಮಗಳ ಸ್ಮಶಾನಕ್ಕಾಗಿ, ಶಾಲೆ, ಅಂಗನವಾಡಿ ಹಾಗೂ ಇನ್ನಿತರ ಸಾರ್ವಜನಿಕ ಉದ್ದೇಶಗಳಿಗಾಗಿ ಜಮೀನು ಮಂಜೂರು ಮಾಡುವಂತೆ ಕೋರಿ ಕಂದಾಯ ಇಲಾಖೆಗೆ ಸಲ್ಲಿಕೆಯಾಗಿರುವ ಅರ್ಜಿಗಳೆಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)

ಆ) ಈ ರೀತಿ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳಿಗೆ ಜಮೀನು ಮಂಜೂರು ಮಾಡಲು ಅಗತ್ಯವಿರುವ ಜಮೀನೆಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)

ಇ) ರಾಜ್ಯದಲ್ಲಿ ಯಾವುದೇ ಉದ್ದೇಶಗಳಿಗೆ ಜಮೀನು ಮಂಜೂರಾಗದೆ ಖಾಲಿ ಉಳಿದಿರುವ ಕಂದಾಯ ಇಲಾಖೆಗೆ ಸೇರಿದ ಭೂಮಿ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)

ಈ) ಸಾರ್ವಜನಿಕ ಉದ್ದೇಶಗಳಿಗಾಗಿ ಜಮೀನು ಮಂಜೂರು ಮಾಡಲು ವಿಳಂಭವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದರೆ ಸಾರ್ವಜನಿಕ ಉದ್ದೇಶಗಳಿಗಾಗಿ ಜಮೀನು ಮಂಜೂರು ಮಾಡಲು ಯಾವುದಾದರೂ ತೊಡಕುಗಳಿವೆಯೆ? (ವಿವರ ಒದಗಿಸುವುದು)

----

15/4/902

**ನೀರಿನ ಹಕ್ಕು ಪತ್ರ**

977 **ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ರೈತರಿಗೆ ನೀರಿನ ಹಕ್ಕುಪತ್ರವನ್ನು ನೀಡುವಲ್ಲಿ ಹಲವಾರು ಗೊಂದಲಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ನೀರಿನ ಹಕ್ಕುಪತ್ರವನ್ನು ನೀಡಲು ಇರುವ ಮಾನದಂಡಗಳೇನು; ನೀರಿನ ಹಕ್ಕುಪತ್ರ ನೀಡುವುದಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಸುತ್ತೋಲೆ ಹಾಗೂ ಆದೇಶಗಳನ್ನು ಹೊರಡಿಸಲಾಗಿದೆಯೇ; (ಸುತ್ತೋಲೆ ಹಾಗೂ ಹಾಗೂ ಆದೇಶದ ಪ್ರತಿಗಳನ್ನು ಒದಗಿಸುವುದು)

ಇ) ಈ ಹಿಂದೆ ಕಂದಾಯ ಇಲಾಖೆಯಿಂದ ನೀರಿನ ಹಕ್ಕುಪತ್ರ ವಿತರಣೆ ಮಾಡಲಾಗತ್ತಿದ್ದು, ಕಳೆದ ಒಂದು ವರ್ಷದಿಂದ ನೀಡಲು ನಿರಾಕರಿಸುತ್ತಿರುವುದರಿಂದ ರೈತರಿಗೆ ತೀವ್ರ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲಿ್ಲ ಈ ಸಮಸ್ಯೆ ನಿವಾರಿಸುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ಒದಗಿಸುವುದು)

----

15/4/1356

**ತ್ರಿ ಚಕ್ರ ವಾಹನ ವಿತರಣೆ**

978 **ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು

ದಯವಿಟ್ಟು ತಿಳಿಸುವರೆ **: -**

ಅ) ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿಕಲಚೇತನರ ಸಬಲೀಕರಣ ಇಲಾಖೆ ಮೂಲಕ ಎಷ್ಟು ಜನ ವಿಕಲಚೇತನರಿಗೆ ಮೋಟಾರು ಚಾಲಿತ ತ್ರಿ ಚಕ್ರ ವಾಹನ ವಿತರಿಸಲಾಗಿದೆ (ಶಾಸಕರ ಮತ್ತು ಸಂಸದರ ಅನುದಾನವೂ ಸೇರಿದಂತೆ ವರ್ಷವಾರು ವಿವರ ಒದಗಿಸುವುದು);
ಆ) ಯಾವ ಯಾವ ಅನುದಾನದಲ್ಲಿ ಎಷ್ಟು ಜನರಿಗೆ ತ್ರಿ ಚಕ್ರ ವಾಹನ ಒದಗಿಸಲಾಗಿದೆ (ತಾಲ್ಲೂಕುವಾರು ಫಲಾನುಭವಿಗಳ ವಿವರ ಒದಗಿಸುವುದು)?

----

**15/4/1357**

**ಬಗರ್ ಹುಕುಂ ಸಕ್ರಮೀಕರಣ**

**979 ಸಿ ಟಿ ರವಿ (ಚಿಕ್ಕಮಗಳೂರು):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಮೂರು ವರ್ಷಗಳಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಮೂನೆ 50 ಹಾಗೂ 53 ರಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು;
ಆ) ಬಗರ್ ಹುಕುಂ ಸಕ್ರಮೀಕರಣ ಸಮಿತಿಯಲ್ಲಿ ಮಂಜೂರಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ವಜಾಗೊಂಡಿರುವ ಮತ್ತು ಸಮಿತಿ ಮುಂದೆ ಮಂಡಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು (ವಿಧಾನಸಭಾ ಕ್ಷೇತ್ರವಾರು ಮಾಹಿತಿ ಒದಗಿಸುವುದು);
ಇ) ಬಗರ್ ಹುಕುಂ ಸಮಿತಿಯಲ್ಲಿ ಮಂಜೂರಾಗಿ ಸಾಗುವಳಿ ಚೀಟಿ ನೀಡಿರುವ ಪ್ರಕರಣಗಳ ಸಂಖ್ಯೆ ಎಷ್ಟು ಸಾಗುವಳಿ ಚೀಟಿ ನೀಡಲು ಬಾಕಿಯಿರುವ ಪ್ರಕರಣಗಳ ಸಂಖ್ಯೆ ಎಷ್ಟು (ಹೋಬಳಿವಾರು ಮಾಹಿತಿ ಒದಗಿಸುವುದು);
ಈ) ಸಾಗುವಳಿ ಚೀಟಿ ನೀಡಲು ಬಾಕಿ ಇರಲು ಕಾರಣಗಳೇನು (ವಿವರ ಒದಗಿಸುವುದು);
ಉ) ಸಾಗುವಳಿ ಚೀಟಿ ನೀಡಿರುವ ಪ್ರಕರಣಗಳಲ್ಲಿ ಪಹಣಿ ವಿತರಣೆ ಮಾಡಿರುವ ಸಂಖ್ಯೆ ಎಷ್ಟು ಹಾಗೂ ಪಹಣಿ ವಿತರಣೆ ಮಾಡಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; ಬಾಕಿ ಇರಲು ಕಾರಣಗಳೇನು; ಯಾವಾಗ ಪಹಣಿ ವಿತರಿಸಲಾಗುವುದು (ವಿವರ ಒದಗಿಸುವುದು)?

----

**15/4/1402**

**ಜನಸಂಪರ್ಕ ಸಭೆಗಳು**

**980 ಎಸ್ ಎನ್ ನಾರಾಯಣಸ್ವಾಮಿ ಕೆ ಎಂ (ಬಂಗಾರಪೇಟೆ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಪ್ರಸ್ತುತ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಜಿಲ್ಲಾಡಳಿತದಿಂದ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ನಡೆಸಿದ ಜನ ಸ್ಪಂದನ ಸಭೆಗಳು ಎಷ್ಟು;
ಆ) ಜನ ಸ್ಪಂದನ ಸಭೆಗಳಲ್ಲಿ ಸ್ವೀಕರಿಸಲಾದ ಅರ್ಜಿಗಳು ಎಷ್ಟು ಮತ್ತು ಸ್ಥಳದಲ್ಲಿ ಇತ್ಯರ್ಥ ಪಡಿಸಲಾದ

ಅರ್ಜಿಗಳು ಎಷ್ಟು? (ವಿವರಗಳನ್ನು ನೀಡುವುದು)

----

15/4/1403

**ಕಾರ್ಯಕ್ರಮಗಳ ವಿವರಗಳು**

981 **ಎಸ್ ಎನ್ ನಾರಾಯಣಸ್ವಾಮಿ ಕೆ ಎಂ (ಬಂಗಾರಪೇಟೆ):**

ಮಾನ್ಯ **ಕಾರ್ಮಿಕ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕೋಲಾರ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ನೊಂದಾವಣೆಗೊಂಡ ಕಾರ್ಮಿಕರ ಸಂಖ್ಯೆ ಎಷ್ಟು;
ಆ) ಇದರಲ್ಲಿ ಕೌಶಲ್ಯಯುಕ್ತ ಮತ್ತು ಅರಕೌಶಲ್ಯಯುಕ್ತ ಕಾರ್ಮಿಕರ ಮತ್ತು ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು; (ವಿವರಗಳನ್ನು ನೀಡುವುದು)
ಇ) ಕಾರ್ಮಿಕರ ನೊಂದಣಿ ಸಮಯದಲ್ಲಿ ನೊಂದಣಿ ಶುಲ್ಕವಾಗಿ ಸಂಗ್ರಹಿಸಿದ ಮೊತ್ತ ಎಷ್ಟು;
ಈ) ಅಪ್ರಾತ ಸಂದರ್ಭದಲ್ಲಿ ನೊಂದಣಿಗೊಂಡ ಅಂಗವಿಕಲ ಕಾರ್ಮಿಕರಿಗೆ ನೀಡಲಾದ ಪರಿಹಾರ ಮೊತ್ತ ಎಷ್ಟು? (ವಿವರಗಳನ್ನು ನೀಡುವುದು)

----

15/4/461

**ಖುಷ್ಕಿ ಭೂಮಿ ಮಂಜೂರಾತಿ**

982 **ಸಂಜೀವ್ ಮತಂದೂರ್ (ಪುತ್ತೂರು):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ದಕ್ಷಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸದರಿ ವರ್ಗಕಾರರು ಮತ್ತು ಭೂನ್ಯಾಯ ಮಂಡಳಿಯಿಂದ ಪಡೆದ ಭೂಮಾಲಿಕರು ಖುಷ್ಕಿ (ಖಾನೆ, ಬಾನೆ, ಖುಷ್ಕಿ) ಭೂಮಿಯನ್ನು ಹೊಂದಿರುತ್ತಾರೆಯೇ;
ಆ) ಖುಷ್ಕಿ ಭೂಮಿಯನ್ನು ಹೊಂದಿರುತ್ತಾರೆ ಎಂದಾದರೆ ಸದರಿ ಜಿಲ್ಲೆಗಳಲ್ಲಿ ಎಷ್ಟು ಎಕರೆ ಜಮೀನು ಇದೆ;
ಇ) ಖುಷ್ಕಿ ಜಮೀನು ರೈತರ ಸ್ವಾಧೀನ ಇದೆಯಾದರೆ ಅವರಿಗೆ ಅದನ್ನು ಮಂಜೂರು ಮಾಡಲು ಸರ್ಕಾರ ತೀರ್ಮಾನಿಸಿದೆಯೇ;
ಈ) ಪುತ್ತೂರು ತಾಲ್ಲೂಕು, ಉಪ್ಪಿನಂಗಡಿ ಹೋಬಳಿಯಲ್ಲಿರುವ ನಾಡ ಕಛೇರಿ ಕಟ್ಟಡ ದುರಸ್ಥಿಗೆ ಯೋಗ್ಯವಾಗಿಲ್ಲದಿರುವುದರಿಂದ ಕಟ್ಟಡದ ಪುನರ್ ನಿರ್ಮಾಣಕ್ಕೆ ತೆಗೆದುಕೊಂಡ ಕ್ರಮಗಳೇನು?

----

15/4/906

**ಹೊಸ ತಾಲ್ಲೂಕು ಕೇಂದ್ರ**

983 **ಶಾಮನೂರು ಶಿವಶಂಕರಪ್ಪ (ದಾವಣಗೆರೆ-ದಕ್ಷಿಣ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ನವಲಗುಂದ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಣ್ಣಿಗೇರಿಯು ಹೊಸ ತಾಲ್ಲೂಕು ಕೇಂದ್ರವಾಗಿ ರಚನೆಯಾಗಿದ್ದು, ಯಾವ ಯಾವ ಕಛೇರಿಗಳನ್ನು ಪ್ರಾರಂಭಿಸಲಾಗಿದೆ; ಇನ್ನು ಯಾವ ಯಾವ ಕಛೇರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ;
ಆ) ಈಗ ಪ್ರಾರಂಭವಾಗಿರುವ ಕಛೇರಿಗಳಲ್ಲಿ ಸಂಪೂರ್ಣವಾಗಿ ಸಿಬ್ಬಂಧಿಗಳನ್ನು ನೇಮಕ ಮಾಡಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು)

----

15/4/319

**ಕಾರ್ಮಿಕರ ನೊಂದನಿ**

**984 ಸಿದ್ದು ಸವದಿ (ತೇರದಾಳ):**

ಮಾನ್ಯ **ಕಾರ್ಮಿಕ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ರಾಜ್ಯದಲ್ಲಿರುವ ನೊಂದಾಯಿತ ಕಾರ್ಮಿಕರ ಸಂಖ್ಯೆ ಎಷ್ಟು; ಯಾವ ಯಾವ ರೀತಿಯ ಕಾರ್ಮಿಕರನ್ನು ನೊಂದಾಯಿಸಿಕೊಳ್ಳಲಾಗುವುದು; ನೊಂದಾಯಿತ ಕಾರ್ಮಿಕರಿಗೆ ಇರುವ ಸವಲತ್ತುಗಳೇನು;
ಆ) ಕೈಮಗ್ಗ ಮತ್ತು ಪವರ್‌ಲೂಮ್‌ಗಳಲ್ಲಿ ಹೊರಗಿನಿಂದ ಬಂದು ಕೂಲಿ ಮಾಡುವ ನೇಕಾರ ಕೂಲಿಗಳಿಗೆ ಈ ಸೌಲಭ್ಯವಿದೆಯೇ; ಇಲ್ಲವಾದಲ್ಲಿ ಕಾರಣಗಳೇನು;
ಇ) ಅವರುಗಳನ್ನು ಕಾರ್ಮಿಕರೆಂದು ಪರಿಗಣಿಸಿ ನೊಂದಾಯಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು)

----

15/4/425

**ಹಕ್ಕು ಪತ್ರಗಳನ್ನು ನೀಡುವುದು**

**985 ಸಿದ್ದು ಸವದಿ (ತೇರದಾಳ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ನಗರಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಹಳ್ಳಿಗಳಲ್ಲಿ ಸುಮಾರು 50 ವರ್ಷಗಳಿಂದ ಅರಣ್ಯದಲ್ಲಿ ಪಕ್ಕಾ ಮನೆ ಕಟ್ಟಿಕೊಂಡು ವಾಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ ಅವರೆಲ್ಲರಿಗೂ ಹಕ್ಕು ಪತ್ರ ನೀಡಲು ಕೈಗೊಂಡ ಕ್ರಮಗಳೇನು;(ವಿವರ ನೀಡುವುದು)
ಇ) ಇಲ್ಲವಾದಲ್ಲಿ, ಅವರುಗಳಿಗೆ ಯಾವ ರೀತಿಯಾಗಿ ಪರ್‍ಯಾಯ ವ್ಯಾವಸ್ಥೆ ಮಾಡಲಾಗುವುದು: ( ಮಾಹಿತಿ ನೀಡುವುದು)
ಈ) ಸರ್ಕಾರದ ಭೂಮಿಯನ್ನು ಅರಣ್ಯ ಇಲಾಖೆಗೆ ನೀಡಿ ಸದರಿ ಅರಣ್ಯ ಭೂಮಿಯನ್ನು ವಸತಿ ಇಲಾಖೆಗೆ ಪಡೆದುಕೊಳ್ಳಲು ಇರುವ ತೊಂದರೆಗಳೇನು?( ವಿವರ ನೀಡುವುದು)

----

15/4/892

**ಅಂಗನವಾಡಿ ಕೇಂದ್ರಗಳ ಪ್ರಾರಂಭ**

**986 ಸಿದ್ದು ಸವದಿ (ತೇರದಾಳ):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ತೇರದಾಳ ಮತಕ್ಷೇತ್ರಕ್ಕೆ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು;
ಆ) ಈ ಕ್ಷೇತ್ರದಲ್ಲಿ ಪ್ರಸ್ತುತ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಕಾರ್ಯನಿರ್ವಹಿಸುತ್ತಿವೆ (ಸಂಪೂರ್ಣ ಮಾಹಿತಿ ನೀಡುವುದು)?

----

**15/4/1395**

### ನೂತನ ತಾಲ್ಲೂಕುಗಳ ರಚನೆ

**987 ಸಿದ್ದು ಸವದಿ (ತೇರದಾಳ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬಾಗಲಕೋಟೆ ಜಿಲ್ಲೆ ತೇರದಾಳ ಮತಕ್ಷೇತ್ರದಲ್ಲಿ ರಚಿಸಲಾಗಿರುವ ನೂತನ ತಾಲ್ಲೂಕು ಕೇಂದ್ರಗಳಲ್ಲಿ ರಚನೆ ಮಾಡಿದ್ದು ಯಾವ ಯಾವ ಗ್ರಾಮ ಪಂಚಾಯತಿಗಳನ್ನು ಮತ್ತು ಪಟ್ಟಣಗಳನ್ನು ಸೇರಿಸಲಾಗಿದೆ;( ಪೂರ್ಣ ಮಾಹಿತಿ ಒದಗಿಸುವುದು)
ಆ) ನೂತನ ತಾಲ್ಲೂಕುಗಳಾದ *ರಬಕವಿ ಬನಹಟ್ಟಿ *ತೇರದಾಳ ಈ ಎರಡು ತಾಲ್ಲೂಕುಗಳಿಗೆ ಯಾವ ಯಾವ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ;ಇಲ್ಲವಾದಲ್ಲಿ ಯಾವಾಗ ಸೌಲಭ್ಯಗಳನ್ನು ಒದಗಿಸಲಾಗುವುದು;
ಇ) ಪೂರ್ಣ ಪ್ರಮಾಣದ ತಾಲ್ಲೂಕು ಮಾಡಲು ಯಾವ ಯಾವ ಇಲಾಖಾ ಕಛೇರಿಗಳನ್ನು ಪ್ರಾರಂಭಿಸಬೇಕು, ಹಾಗಿದ್ದಲ್ಲಿ ಇದುವರೆಗೆ ಇಲಾಖೆಗಳನ್ನು ಪ್ರಾರಂಭಿಸದಿರಲುಕಾರಣವೇನು,ಯಾವಾಗ ಎಲ್ಲಾ ಇಲಾಖೆಗಳನ್ನು ಪ್ರಾರಂಭಿಸಲಾಗುವುದು;(ಮಾಹಿತಿ ನೀಡುವುದು)
ಈ) ಕ್ಷೇತ್ರದಲ್ಲಿ ಎರಡು ನೂತನ ತಾಲ್ಲೂಕುಗಳು ಆದರೂ ಸಾರ್ವಜನಿಕರು ಜಮಖಂಡಿ, ಮುಧೋಳ ತಾಲ್ಲೂಕುಗಳಿಗೆ ಅಡ್ಡಾಡುವ ಸ್ಥಿತಿ ಇರಲು ಕಾರಣಗಳೇನು; ಎರಡೂ ತಾಲ್ಲೂಕಾ ಕೇಂದ್ರಗಳಿಗೆ ಮಿನಿ ವಿಧಾನಸೌಧ ಕೇಂದ್ರಗಳನ್ನು ಯಾವಾಗ ಮಂಜೂರು ಮಾಡಲಾಗುವುದು?

----

**15/4/1396**

### ಉಪನೊಂದಣಾಧಿಕಾರಿ ಕಛೇರಿ

**988 ಸಿದ್ದು ಸವದಿ (ತೇರದಾಳ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ನೂತನ ತಾಲ್ಲೂಕು ಕೇಂದ್ರಗಳಲ್ಲಿ ಉಪನೊಂದಣಾಧಿಕಾರಿ ಕಛೇರಿಗಳನ್ನು ಆರಂಭಿಸಲಾಗಿದೆಯೇ; ಇಲ್ಲವಾದಲ್ಲಿ ಯಾವಾಗ ಪ್ರಾರಂಭಿಸಲಾಗುವುದು;

ಆ) ಎಷ್ಟು ನೂತನ ತಾಲ್ಲೂಕು ಕೇಂದ್ರಗಳಲ್ಲಿ ಈಗಾಗಲೇ ಉಪನೊಂದಣಾಧಿಕಾರಿ ಕಛೇರಿಗಳನ್ನು ಪ್ರಾರಂಭಿಸಲಾಗಿದೆ ?( ಮಾಹಿತಿ ಒದಗಿಸುವುದು)

----

15/4/898

**ಮಂಜೂರಾದ ಅನುದಾನ ಕುರಿತು**

989 **ವಿ. ಸೋಮಣ್ಣ (ಗೋವಿಂದರಾಜನಗರ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಕಳೆದ 3 ವರ್ಷಗಳಿಂದ 2019 ಜೂನ್ ಅಂತ್ಯದವರೆಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬೆಳೆ ಪರಿಹಾರ , ಬರ ಪರಿಹಾರ , ನೆರೆ ಪರಿಹಾರಕ್ಕಾಗಿ ಬಿಡುಗಡೆಯಾಗಿರುವ ಅನುದಾನವೆಷ್ಟು; ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; ( ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)
ಆ) ಕಳೆದ 3 ವರ್ಷಗಳಿಂದ 2019ರ ಜೂನ್ ಅಂತ್ಯದವರೆಗೆ ರಾಜ್ಯ ಸರ್ಕಾರದಿಂದ ಬೆಳೆ ಪರಿಹಾರ, ಬರ ಪರಿಹಾರ, ನೆರೆ ಪರಿಹಾರಕ್ಕಾಗಿ ಬಿಡುಗಡೆ ಮಾಡಿಲಾಗಿರುವ ಅನುದಾನವೇಷ್ಟು ( ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

----

15/4/615

**ಖಾಲಿ ಹುದ್ದೆಗಳ ಭರ್ತಿ**

990 **ಸೌಮ್ಯ ರೆಡ್ಡಿ (ಜಯನಗರ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಜಯನಗರ ಮತ್ತು ಬನಶಂಕರಿ ನಾಡಕಛೇರಿಗಳಲ್ಲಿ ಮಂಜೂರಾಗಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು; ಮಂಜೂರಾಗಿರುವ ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ; (ಹುದ್ದೆವಾರು ಪ್ರತ್ಯೇಕವಾಗಿ ಮಾಹಿತಿ ನೀಡುವುದು)
ಆ) ಈ ನಾಡಕಛೇರಿಗಳಲ್ಲಿ ಸಿಬ್ಬಂದಿಗಳ ಕೊರತೆಯಿಂದ ಸಾರ್ವಜನಿಕ ಕೆಲಸಗಳು ನಿಗಧಿತ ಸಮಯದಲ್ಲಿ ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ;
ಇ) ಜಯನಗರ ಮತ್ತು ಬನಶಂಕರಿ ನಾಡಕಛೇರಿಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳಾದ ಕಂಪ್ಯೂಟರ್, ಪ್ರಿಂಟರ್ ಹಾಗೂ ಇತ್ಯಾದಿ ಸಲಕರಣೆ/ಸೌಕರ್ಯಗಳನ್ನು ಒದಗಿಸಲಾಗಿದೆಯೇ;
ಈ) ಸರ್ಕಾರದಿಂದ ಒದಗಿಸಲಾಗುತ್ತಿರುವ ವೃದ್ಧಾಪ್ಯ ವೇತನ, ವಿಧವಾ ವೇತನ ಮತ್ತು ಅಂಗವಿಕಲರ ಫಲಾನುಭವಿಗಳಿಗೆ ಆದೇಶ ನೀಡಿದ್ದಾಗ್ಯೂ ಪಿಂಚಣಿ ಮೊತ್ತ ಬ್ಯಾಂಕ್ ಖಾತೆಗೆ ಜಮೇ ಆಗಲು ತಿಂಗಳುಗಟ್ಟಲೆ ತಡವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದಕ್ಕೆ ಪರಿಹಾರವೇನು?

----

15/4/1050

## ಪ್ಲಾಸ್ಟಿಕ್ ನಿಷೇದ

**991 ಸೌಮ್ಯ ರೆಡ್ಡಿ (ಜಯನಗರ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಪ್ಲಾಸ್ಟಿಕ್ ನಿಷೇದ ಮಾಡಲು ಸರ್ಕಾರ ಆದೇಶ ಹೊರಡಿಸಿದ್ದರೂ ಸಹ ರಾಜ್ಯಾದ್ಯಂತ ಹಾಗೂ ಮುಖ್ಯವಾಗಿ ಬೆಂಗಳೂರು ನಗರದಲ್ಲಿ ಪ್ಲಾಸ್ಟಿಕ್ ಬಳಕೆ ಯತೇಚ್ಚವಾಗಿ ಮುಂದುವರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಉಪಯೋಗಿಸಿದ ಪ್ಲಾಸ್ಟಿಕ್‌ನ್ನು ಎಲ್ಲೆಂದರಲ್ಲಿ ಬಿಸಾಡುತ್ತಿದ್ದು, ಅದನ್ನು ಬೀದಿಯ ದನ ಕರುಗಳು ಮೂಕ ಪ್ರಾಣಿಗಳು ತಿಂದು ಸಾವಿಗೀಡಾಗುತ್ತಿರುವುದು ಹಾಗೂ ಅನಾರೋಗ್ಯಕ್ಕೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಪ್ಲಾಸ್ಟಿಕ್ ಬಳಕೆಯಿಂದ ಪರಿಸರದ ಮೇಲೆ ಅನೇಕ ದುಷ್ಪರಿಣಾಮಗಳು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹೊರ ರಾಜ್ಯದಿಂದ, ಪ್ಲಾಸ್ಟಿಕ್ ಕವರ್‌ಗಳು ಸರಬರಾಜು ಆಗುತ್ತಿದ್ದು ಇದನ್ನು ನಿಷೇದಿಸಲು ಸರ್ಕಾರ ದಿಟ್ಟ ನಿರ್ಧಾರ ಕೈಗೊಳ್ಳುವುದೇ;

ಈ) ಬೆಂಗಳೂರು ನಗರವನ್ನು ಪ್ಲಾಸ್ಟಿಕ್ ಮುಕ್ತ ನಗರವನ್ನಾಗಿ ಮಾಡುವ ದಿಕ್ಕಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

----

15/4/263

## ಪೌಷ್ಠಿಕಾಂಶ ಕೊರತೆ

**992 ಬಿ ಶ್ರೀರಾಮುಲು (ಮೊಳಕಾಲ್ಮೂರು):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ 201819ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಹಾಗೂ ವಿಕಲಚೇತನರ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

ಆ) ರಾಜ್ಯದಲ್ಲಿ ಪೌಷ್ಠಿಕಾಂಶ ಕೊರತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಎಷ್ಟು; ಎಷ್ಟು ಜಿಲ್ಲೆಗಳಲ್ಲಿ ಅತಿಹೆಚ್ಚು ಪೌಷ್ಠಿಕಾಂಶ ಕೊರತೆಯಿಂದ ಮಕ್ಕಳು ಬಳಲುತ್ತಿದ್ದಾರೆಫೆ;

ಇ) ಪೌಷ್ಠಿಕಾಂಶ ಕೊರತೆಯಿಂದ ಬಳಲುತ್ತಿರುವ ಮಕ್ಕಳ ಭೌದ್ದಿಕ ಮತ್ತು ಮಾನಸಿಕ ಬೆಳವಣಿಗೆಗೆ ಸರ್ಕಾರ ಇದುವರೆಗೆ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

ಈ) ಮೊಳಕಾಲ್ಮೂರು ಮತ ಕ್ಷೇತ್ರದಲ್ಲಿ ಪೌಷ್ಠಿಕಾಂಶ ಕೊರತೆಯಿಂದ ಮಕ್ಕಳು ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಂತಹ ಪ್ರಕರಣಗಳು ಎಷ್ಟು? (ವಿವರ ನೀಡುವುದು)

----

15/4/264

## ಹೊರಗುತ್ತಿಗೆ ನೌಕರರ ವೇತನ

993 ಬಿ ಶ್ರೀರಾಮುಲು (ಮೊಳಕಾಲ್ಮೂರು):

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಹೊರಗುತ್ತಿಗೆಯ ಆಧಾರದ ಮೇಲೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಗಳಲ್ಲಿ ಡಾಟಾ ಎಂಟ್ರಿ ಆಪರೇಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)
ಆ)ಸದರಿ ನೌಕರರುಗಳು ಕಳೆದ 4 ತಿಂಗಳಿಂದ ವೇತನವಿಲ್ಲದೆ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;
ಇ) ಕಳೆದ 16 ವರ್ಷಗಳಿಂದ ಸೇವೆಸಲ್ಲಿಸುತ್ತಿರುವ| ಈ ನೌಕರರನ್ನು ಹೊಸ ಏಜೆನ್ಸಿ ಮುಖಾಂತರ ಸದರಿಯವರನ್ನೇ ಮುಂದುವರಿಸಲು ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ;
ಈ) ಸದರಿ ನೌಕರರನ್ನು ಕರ್ತವ್ಯ ನಿರ್ವಹಣೆಗೆ ಯಾವ ಏಜೆನ್ಸಿಯವರಿಗೆ ವಹಿಸಿಕೊಡಲಾಗಿದೆ; ಈ ಸಂಸ್ಥೆಯ ಗುತ್ತಿಗೆ ಅವಧಿ ಯಾವಾಗ ಮುಗಿದಿರುತ್ತದೆ ಮತ್ತು ಹೊಸ ಸಂಸ್ಥೆಗೇನಾದರು ಗುತ್ತಿಗೆಯನ್ನು ನೀಡಲಾಗಿದೆಯೇ; (ಮಾಹಿತಿ ಒದಗಿಸುವುದು)
ಉ) ಸದರಿ ಗುತ್ತಿಗೆ ನೌಕರರು ಸರ್ಕಾರಕ್ಕೆ ಮತ್ತು ನೋಂದಣಿ ಮಹಾ ಪರಿವೀಕ್ಷಕರು ಬೆಂಗಳೂರು ಇವರಿಗೆ ಸಲ್ಲಿಸಿದ ಮನವಿ ಪತ್ರಗಳ ಮೇಲೆಯಾವ ಕ್ರಮ ತೆಗೆದುಕೊಳ್ಳಲಾಗಿದೆ?

----

15/4/873

**ಬಾಲಕಾರ್ಮಿಕರ ಕುರಿತು**

994 ಬಿ ಶ್ರೀರಾಮುಲು (ಮೊಳಕಾಲ್ಮೂರು):

ಮಾನ್ಯ **ಕಾರ್ಮಿಕ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಕಳೆದ 3ವರ್ಷಗಳಲ್ಲಿ ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ಬಿಡುಗಡೆಯಾದ ಅನುದಾನವೆಷ್ಟು; (ಜಿಲ್ಲಾವಾರು ವಿವರ ನೀಡುವುದು)
ಆ) ಈ ಕಾರ್ಖಾನೆಗಳ ಬಾಲಕಾರ್ಮಿಕರಾಗಿ ದುಡಿಯುತ್ತಿರುವ ಮಕ್ಕಳ ಪ್ರಕರಣಗಳು ಎಷ್ಟು; ಎಷ್ಟು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)
ಇ) ಬಾಲಕಾರ್ಮಿಕರ ಪದ್ಧತಿ ನಿರ್ಮೂಲನೆಗಾಗಿ ಸರ್ಕಾರದಿಂದ ಇದುವರೆಗೂ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಇಂತಹ ಪ್ರಕರಣಗಳಲ್ಲಿ ಕಂಡುಬಂದಿರುವ ಬಾಲಕಾರ್ಮಿಕರಿಗೆ ಅವರ ಮುಂದಿನ ಜೀವನದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;
ಈ) ಮೊಳಕಾಲ್ಮೂರು ಮತ ಕ್ಷೇತ್ರದಲ್ಲಿ ಬಾಲಕಾರ್ಮಿಕರ ಪ್ರಕರಣಗಳು ಕಂಡುಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

----

15/4/875

**ಬರಪರಿಹಾರ ಹಾಗೂ ನಿರ್ವಹಣೆ**

995 ಬಿ ಶ್ರೀರಾಮುಲು (ಮೊಳಕಾಲ್ಮೂರು):

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಬರಪರಿಹಾರ ಕಾಮಗಾರಿಗಳಿಗೆ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)
ಆ) ಬರಪರಿಹಾರ ಅನುದಾನದ ಹಂಚಿಕೆಯಲ್ಲಿ ಸರ್ಕಾರ ಅನುಸರಿಸಿರುವ ಮಾನದಂಡಗಳೇನು;
ಇ) ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಕ್ಷೇತ್ರದ ಬರವೀಕ್ಷಣಾ ಸಮಿತಿ ವರದಿಯನ್ನು ನೀಡುವುದು;
ಈ) ಬರಪೀಡಿತ ಪ್ರದೇಶಗಳಲ್ಲಿ ಸರ್ಕಾರ ಧನಕರಗಳಿಗೆ ಎಷ್ಟು ಗೋಶಾಲೆಗಳನ್ನು ನಿರ್ಮಿಸಲಾಗಿದೆ; (ಚಿತ್ರದುರ್ಗ ಜಿಲ್ಲೆಯ ಸಂಪೂರ್ಣ ವಿವರ ನೀಡುವುದು)

----

**15/4/603**

**ರಾಕ್ ಕ್ಲೈಂಬಿಂಗ್ ತರಬೇತಿ ಸಂಸ್ಥೆ**

**996 ಎಸ್ ಎನ್ ಸುಬ್ಬಾರೆಡ್ಡಿ (ಚಿನ್ನಕಾಯಲಪಲ್ಲಿ) (ಬಾಗೇಪಲ್ಲಿ ):**

ಮಾನ್ಯ **ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಗುಡಿಬಂಡೆ ತಾಲ್ಲೂಕು ವರ್ಲಕೊಂಡ ಏಕಶೀಲಾ ಬೆಟ್ಟದಲ್ಲಿ ಜನರಲ್ ತಿಮ್ಮಯ್ಯ ಸಾಹಸ ಅಕಾಡೆಮಿಯಿಂದ ರಾಕ್ ಕ್ಲೈಂಬಿಂಗ್ ತರಬೇತಿ ನೀಡಲು ಮತ್ತು ರೋಪ್ ವೇ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;
ಆ) ಇದ್ದಲ್ಲಿ, ಪ್ರಸ್ತುತ ಯಾವ ಹಂತದಲ್ಲಿದೆ;
ಇ) ಈ ಯೋಜನೆ ಪ್ರಾರಂಭ ಮಾಡಲು ಎಷ್ಟು ಹಣ ಮೀಸಲಿರಿಸಲಾಗಿದೆ;( ವಿವರ ನೀಡುವುದು)
ಈ) ಈ ಕಾರ್ಯಕ್ರಮವನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

----

**15/4/872**

**ಮಾತೃಪೂರ್ಣ ಯೋಜನೆ**

**997 ಡಾ|| ಕೆ ಸುಧಾಕರ್ (ಚಿಕ್ಕಬಳ್ಳಾಪುರ):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಹಿಂದಿನ ಸರ್ಕಾರವು ಜಾರಿ ಮಾಡಿದ್ದ ಮಾತೃಪೂರ್ಣ ಯೋಜನೆಯ ಪ್ರಸ್ತುತ ಸ್ಥಿತಿಗತಿಗಳೇನು; ಅದರ ಸಮರ್ಪಕ ಜಾರಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರವಾದ ಮಾಹಿತಿಯನ್ನು ನೀಡುವುದು)
ಆ) ಪ್ರಸ್ತುತ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಅಂಗನವಾಡಿಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ; ಸ್ವಂತ ಕಟ್ಟಡಗಳಿಗಾಗಿ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು? (ವಿವರವಾದ ಮಾಹಿತಿಯನ್ನು ನೀಡುವುದು)
ಇ) ಪ್ರತಿ ತಾಲ್ಲೂಕಿನಲ್ಲಿ ವಿಕಲಚೇತನರನ್ನು ಗುರುತಿಸುವ ಕಾರ್ಯ ನಡೆದಿದೆಯೇ; ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ವಿಕಲಚೇತನರ ಸಂಖ್ಯೆ ಎಷ್ಟು ವಿಕಲಚೇತನರ ಅಭಿವೃದ್ಧಿಗಾಗಿ

ಜಿಲ್ಲಾ ಹಂತದಿಂದ ಗ್ರಾಮ ಪಂಚಾಯ್ತಿಯ ಹಂತದವರೆಗೂ ಕಾರ್ಯನಿರ್ವಹಿಸುವ ಸಿಬ್ಬಂದಿಗಳೆಷ್ಟು ಹಾಗೂ ಅವರ ಕಾರ್ಯಗಳೇನು (ಮಾಹಿತಿಯನ್ನು ನೀಡುವುದು)

ಈ) ಈ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿಕಲಚೇತನರ ಅಭಿವೃದ್ಧಿ ಇಲಾಖೆಯಲ್ಲಿ ಜಿಲ್ಲಾ ಹಂತದಿಂದ ಗ್ರಾಮ ಪಂಚಾಯ್ತಿಯ ಹಂತದವರೆಗೂ ಎಷ್ಟು ಹುದ್ದೆಗಳು ಖಾಲಿಯಿವೆ ಸದರಿ ಖಾಲಿಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರವಾದ ಮಾಹಿತಿಯನ್ನು ನೀಡುವುದು)

----

15/4/406

**ಮುಜರಾಯಿ ದೇವಸ್ಥಾನ**

998 **ಬಿ.ಎಂ. ಸುಕುಮಾರ್ ಶೆಟ್ಟಿ (ಬೈಂದೂರು):**

ಮಾನ್ಯ **ಕಂದಾಯ ಇಲಾಖೆಯಿಂದ ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಉಡುಪಿ ಜಿಲ್ಲೆಯಲ್ಲಿ ಮುಜರಾಯಿ ವ್ಯಾಪ್ತಿಗೆ ಬರುವ ದೇವಸ್ಥಾನಗಳು ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)

ಆ) 2017-18, 2018-19 ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯ ದೇವಸ್ಥಾನಗಳ ಅಭಿವೃದ್ಧಿಗಾಗಿ ನೀಡಿರುವ ಅನುದಾನ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)

ಇ) ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರ ಮತ್ತು ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನ ಎಷ್ಟು; ಇವುಗಳಲ್ಲಿ ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ; ಎಷ್ಟು ಕಾಮಗಾರಿಗಳು ಬಾಕಿ ಇವೆ; (ಸಂಪೂರ್ಣ ವಿವರ ಒದಗಿಸುವುದು)

ಈ) ಉಡುಪಿ ಜಿಲ್ಲೆ ವ್ಯಾಪ್ತಿಯ ಮುಜರಾಯಿ ದೇವಸ್ಥಾನಗಳಿಂದ 2017-18, 2018-19 ನೇ ಸಾಲಿನಲ್ಲಿ ಬಂದ ಆದಾಯ ಎಷ್ಟು; ಆ ಹಣವನ್ನು ಯಾವ ಉದ್ದೇಶಗಳಿಗೆ ಬಳಸಲಾಗಿದೆ? (ದೇವಸ್ಥಾನವಾರು ವಿವರ ಒದಗಿಸುವುದು)

----

15/4/1351

**ಪರಿಹಾರ ಮೊತ್ತ ಹೆಚ್ಚಳ**

999 **ಬಿ.ಎಂ. ಸುಕುಮಾರ್ ಶೆಟ್ಟಿ (ಬೈಂದೂರು):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಪ್ರಕೃತಿ ವಿಕೋಪದಡಿ ಹಾನಿಯಾದಲ್ಲಿ ಪ್ರಸ್ತುತ ಇರುವ ವಿವಿಧ ಪರಿಹಾರ ಮೊತ್ತಧವೆಷ್ಟು (ವಿವರ ನೀಡುವುದು);

ಆ) ಪ್ರಕೃತಿ ವಿಕೋಪದಡಿ ಹಾನಿಯಾದಲ್ಲಿ ವಿತರಿಸುವ ಪರಿಹಾರ ಧನವು ಹಾನಿ ಪ್ರಮಾಣಕ್ಕೆ ಅನುಗುಣವಾಗಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಹಾನಿ ಪ್ರಮಾಣದ ಶೇಕಡಾವಾರು ಅಂದಾಜು ಮೊತ್ತಕ್ಕೆ ಅನುಗುಣವಾಗಿ ಪರಿಹಾರ ಧನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ಮಾಹಿತಿ ನೀಡುವುದು)?

----

15/4/1352

**ಮೂಲಭೂತ ಸೌಕರ್ಯ**

1000 **ಬಿ.ಎಂ. ಸುಕುಮಾರ್ ಶೆಟ್ಟಿ (ಬೈಂದೂರು):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗ್ರಾಮ ಮಟ್ಟದ ಗ್ರಾಮ ಕರಣೀಕರ ಕಛೇರಿಗಳ ಕಟ್ಟಡಗಳು ಹಾಳಾಗಿರುವುದು ಹಾಗೂ ಮೂಲಭೂತ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದ್ದಲ್ಲಿ,ಇತ್ತೀಚಿನ ದಿನಗಳಲ್ಲಿ ಸರ್ಕಾರದ ದೈನಂದಿನ ಹೆಚ್ಚಿನ ಕೆಲಸ ಕಾರ್ಯಗಳು ಆನ್‌ಲೈನ್ ಮೂಲಕ ಅನುಷ್ಠಾನವಾಗುತ್ತಿರುವುದರಿಂದ ಗ್ರಾಮ ಮಟ್ಟದ ಗ್ರಾಮ ಕರಣೀಕರ ಕಛೇರಿಗಳಿಗೆ ಕಂಪ್ಯೂಟರ್ ಮತ್ತು ಇತರೆ ಮೂಲಭೂತ ಸೌಕರ್ಯ ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;
ಇ) ಇದ್ದಲ್ಲಿ, ಎಷ್ಟು ದಿನಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು (ಮಾಹಿತಿ ನೀಡುವುದು)?

----

15/4/1405

**94 ಸಿ ಅರ್ಜಿಗಳು**

1001 **ಬಿ.ಎಂ. ಸುಕುಮಾರ್ ಶೆಟ್ಟಿ (ಬೈಂದೂರು):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 94 ಸಿ ಅಡಿ ಅನಧಿಕೃತ ನಿರ್ಮಾಣ ಕ್ರಮಬದ್ಧಗೊಳಿಸುವಿಕೆಗೆ ಅರ್ಜಿ ಸಲ್ಲಿಸಿದವುಗಳಲ್ಲಿ ಡೀಮ್ಡ್ ಮತ್ತು ಭಾಗಶಃ ಡೀಮ್ಡ್ ಫಾರೆಸ್ಟ್ ಎಂದು ಮಂಜೂರಾತಿಗೆ ಬಾಕಿ ಇರುವ ಅರ್ಜಿಗಳೆಷ್ಟು; (ಗ್ರಾಮವಾರು ಸಂಪೂರ್ಣ ಮಾಹಿತಿ ನೀಡುವುದು)
ಆ) ಭಾಗಶಃ ಡೀಮ್ಡ್ ಫಾರೆಸ್ಟ್ ಪ್ರದೇಶಗಳನ್ನು ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟೀ ಸರ್ವೆ ಮಾಡಿ ಡೀಮ್ಡ್ ಫಾರೆಸ್ಟ್ ಹೊರತುಪಡಿಸಿದ ಜಾಗದಲ್ಲಿ ಅರ್ಹ 94ಸಿ ಅರ್ಜಿದಾರರಿಗೆ ಮಂಜೂರಾತಿ ನೀಡಲು ಅವಕಾಶ ಇದೆಯೇ; ಇದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

----

15/4/908

**ಮಾಶಾಸನ**

1002 **ಸುನಿಲ್ ಬಿಳಿಯ ನಾಯಕ್ (ಭಟ್ಕಳ):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಕಳೆದ ಒಂದು ವರ್ಷಕ್ಕಿಂತ ಹೆಚ್ಚು ಸಮಯದಿಂದ ಸಂಧ್ಯಾ ಸುರಕ್ಷಾ ಫಲಾನುಭವಿಗಳಿಗೆ ಮಾಶಾಸನ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಕಳೆದ ಮೂರು ವರ್ಷಗಳಿಂದ ಭಟ್ಕಳ ಹೊನ್ನಾವರ ವಿಧಾನ ಸಭಾ ಕ್ಷೇತ್ರದಲ್ಲಿ ಸಂಧ್ಯಾ ಸುರಕ್ಷಾ ಯೋಜನೆಯಡಿ ಮಾಶಾಸನ ದೊರೆಯದಿರುವ ಫಲಾನುಭವಿಗಳೆಷ್ಟು; (ವಿವರ ನೀಡುವುದು)
ಇ) ಸರ್ಕಾರ ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

----

15/4/196

**ಡೀಮ್ಡ್ ಫಾರೆಸ್ಟ್**

**1003 ವಿ ಸುನಿಲ್ ಕುಮಾರ್ (ಕಾರ್ಕಳ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಉಡುಪಿ ಜಿಲ್ಲೆಯಲ್ಲಿ ಗುರುತಿಸಿರುವ ಡೀಮ್ಡ್ ಫಾರೆಸ್ಟ್ ಪ್ರದೇಶಗಳಲ್ಲಿ ಕೆಲವೊಂದು ಜಾಗಗಳನ್ನು ಪಟ್ಟಿಯಿಂದ ಕೈ ಬಿಡಲು ಜಿಲ್ಲಾಡಳಿತ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಪ್ರಸ್ತಾವನೆ ಬಗ್ಗೆ ಸರ್ಕಾರದ ನಿಲುವೇನು; (ಸಂಪೂರ್ಣ ವಿವರಗಳನ್ನು ಒದಗಿಸುವುದು)
ಆ) ಸದರಿ ಪ್ರಸ್ತಾವನೆಗೆ ಸೂಕ್ತ ಕ್ರಮ ಕೈಗೊಳ್ಳುವಲ್ಲಿ ಸರ್ಕಾರಕ್ಕೆ ಇರುವ ತೊಡಕುಗಳೇನು;
ಇ) ಈ ಪ್ರಸ್ತಾವನೆ ಜಿಲ್ಲಾಡಳಿತದಿಂದ ಯಾವಾಗ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ; (ದಿನಾಂಕ ಸಹಿತ ಸಂಪೂರ್ಣ ವಿವರಗಳನ್ನು ಒದಗಿಸುವುದು)
ಈ) ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟಿ ಸರ್ವೆ ಮಾಡಿ ಈ ಪ್ರಸ್ತಾವನೆ ತಯಾರಿಸಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು)

----

15/4/886

**ಅರಣ್ಯಕ್ಕೆ ಬೆಂಕಿ ಪ್ರಕರಣ**

**1004 ವಿ ಸುನಿಲ್ ಕುಮಾರ್ (ಕಾರ್ಕಳ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಬಂಡಿಪುರದ ಅಭಯಾರಣ್ಯದ ಬೆಂಕಿ ಅವಘಡದ ಪ್ರಕರಣಗಳ ತನಿಖೆ ಪೂರ್ಣಗೊಂಡಿದೆಯೇ; (ತನಿಖೆಯ ಸಂಪೂರ್ಣ ವಿವರಗಳನ್ನು ನೀಡುವುದು)
ಆ) ಬೆಂಕಿ ಹಚ್ಚಿದ್ದು ಯಾರೆಂದು ಪತ್ತೆಮಾಡಲಾಗಿದೆಯೇ; ಇದಕ್ಕೆ ಕಾರಣಗಳು ತಿಳಿದುಬಂದಿವೆಯೇ; ಅಂತಹ ಸಂಸ್ಥೆಯ /ವ್ಯಕ್ತಿಗಳ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;
ಇ) ತನಿಖಾ ವರದಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಸದರಿಯವರಮೇಲೆ ಮೊಕದ್ದಮೆ ಹೂಡಲು ಇರುವ ತೊಂದರೆಗಳೇನು:
ಈ) ಈ ರೀತಿಯ ಅವಘಡಗಳು ರಾಜ್ಯದ ಯಾವ ಯಾವ ಭಾಗದಲ್ಲಿ ನಡೆದಿವೆ; ಇದರಿಂದ ಉಂಟಾದ ನಷ್ಟವೆಷ್ಟು; ಬೆಂಕಿ ಅವಘಡ ತಡೆಯಲು ಸರ್ಕಾರ ಉದ್ದೇಶಿಸಿರುವ ಮುಂಜಾಗ್ರತಾ ಕ್ರಮಗಳೇನು; (ವಿವರ ನೀಡುವುದು) ಅರಣ್ಯ ರಕ್ಷಕರ ವನಪಾಲಕ/ಕಾವಲುಗಾರರ ಪಾತ್ರವೇನು; ರಕ್ಷಣೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

----

15/4/1385

**ಇ.ಎಸ್.ಐ. ಆಸ್ಪತ್ರೆ ಸ್ಥಾಪನೆ**

1005 **ವಿ ಸುನಿಲ್ ಕುಮಾರ್ (ಕಾರ್ಕಳ):**

ಮಾನ್ಯ **ಕಾರ್ಮಿಕ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಇ.ಎಸ್.ಐ. ಆಸ್ಪತ್ರೆಗಳನ್ನು ಪ್ರಾರಂಭಿಸುವ ಬೇಡಿಕೆ ಇದೆ; ಹೊಸದಾಗಿ ಎಷ್ಟು ಇ.ಎಸ್.ಐ. ಚಿಕಿತ್ಸಾಲಯಗಳನ್ನು ಪ್ರಾರಂಭಿಸಲಾಗಿದೆ ; (ಜಿಲ್ಲಾವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)

ಆ) ಹೊಸದಾಗಿ 61 ಇ.ಎಸ್.ಐ. ಆಸ್ಪತ್ರೆಗಳನ್ನು ಪ್ರಾರಂಭಿಸಲು 201718ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಈ ಬಗ್ಗೆ ಕೈಗೊಂಡ ಕ್ರಮವೇನು;

ಇ) ರಾಜ್ಯದಲ್ಲಿ ಒಟ್ಟು ಎಷ್ಟು ಇ.ಎಸ್.ಐ. ಆಸ್ಪತ್ರೆಗಳು ಕಾರ್ಯಚರಿಸುತ್ತಿವೆ? (ಜಿಲ್ಲಾವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)

----

15/4/1386

**ಭೂ ಕಬಳಿಕೆ ಅಪರಾದ ಪ್ರಕರಣ**

1006 **ವಿ ಸುನಿಲ್ ಕುಮಾರ್ (ಕಾರ್ಕಳ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) "ಕರ್ನಾಟಕ ಭೂ ಕಬಳಿಕೆ ನಿಷೇಧಧ ಅಧಿನಿಯಮ 2011" ಜಾರಿಗೆ ಬಂದ ನಂತರ ರಾಜ್ಯದ ವಿಶೇಷ ನ್ಯಾಯಾಲಯದಲ್ಲಿ ದಾಖಲಾದ ಅಪರಾಧ ಪ್ರಕರಣಗಳು ಎಷ್ಟು; (ಜಿಲ್ಲಾವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)

ಆ) ನ್ಯಾಯಾಲಯದ ಆದೇಶದಂತೆ ಅನಧಿಕೃತವಾಗಿ ಒತ್ತುವರಿಯಾದ ಎಷ್ಟು ಎಕರೆ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ; ( ಜಿಲ್ಲಾವಾರು ವಿಸ್ತೀರ್ಣ ಸಹಿತ ಸಂಪೂರ್ಣ ವಿವರಗಳನ್ನು ಒದಗಿಸುವುದು)

ಇ) ಸ್ವಾಧೀನಪಡಿಸಿಕೊಂಡ ಜಮೀನಿನ ಪ್ರಸ್ತುತ ಸ್ಥಿತಿಯೇನು; ಇದನ್ನು ಯಾವ ಉಪಯೋಗಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ;

ಈ) ಸ್ವಾಧೀನಪಡಿಸಿಕೊಂಡ ಜಮೀನನ್ನು ಇತರೆ ಉಪಯೋಗಕ್ಕೆ ಬಳಸಿಕೊಳ್ಳಲು ನೀಡಲಾಗಿದೆಯೇ; ನೀಡಿದ್ದಲ್ಲಿ, ಯಾವ ನಿಯಮಾವಳಿ ಪ್ರಕಾರ ನೀಡಲಾಗಿದೆ?

----

15/4/1387

**ಭಾಗ್ಯಲಕ್ಷ್ಮಿ ಯೋಜನೆ**

1007 **ವಿ ಸುನಿಲ್ ಕುಮಾರ್ (ಕಾರ್ಕಳ):**

ಮಾನ್ಯ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಭಲೀಕರಣ ಇಲಾಖೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಸಚಿವರು** ಈ ವಿಷಯಗಳನ್ನು

ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಹೆಣ್ಣು ಮಗುವಿಗೆ ನೀಡುತ್ತಿರುವ ಭಾಗ್ಯಲಕ್ಷ್ಮಿ ಯೋಜನೆಯ ಬಾಂಡ್ ಕ್ಲುಪ್ತ ಸಮಯದಲ್ಲಿ ವಿತರಣೆಯಾಗದಿರುದನ್ನು ಗಂಭೀರವಾಗಿ ಪರಿಗಣಿಸದಿರಲು ಕಾರಣಗಳೇನು;
ಆ) 201718ನೇ ಸಾಲಿನಿಂದ ಎಷ್ಟು ಮಂದಿಗೆ ಭಾಗ್ಯಲಕ್ಷ್ಮಿ ಯೋಜನೆಯ ಬಾಂಡ್ ಮಂಜೂರಾಗಿರುತ್ತದೆ; (ಜಿಲ್ಲಾವಾರು/ತಾಲ್ಲೂಕುವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)
ಇ) ಎಷ್ಟು ಬಾಂಡ್ ವಿತರಣೆಯಾಗಿದೆ; ವಿತರಿಸಲು ಎಷ್ಟು ಬಾಕಿಯಿದೆ; ಬಾಕಿಯಿರಿಸಲು ಕಾರಣಗಳೇನು; (ಜಿಲ್ಲಾವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)
ಈ) ಸದರಿ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ಪಾರದರ್ಶಕವಾಗಿ ಕ್ಲುಪ್ತ ಸಮಯದಲ್ಲಿ ವಿತರಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?

----

**15/4/417**

**ಕೌಶಲ್ಯ ಕರ್ನಾಟಕ ಯೋಜನೆ**

1008 **ಉಮಾನಾಥ ಎ. ಕೋಟಿಯನ್ (ಮೂಡಬಿದರೆ):**

ಮಾನ್ಯ **ಕಂದಾಯ ಇಲಾಖೆಯಿಂದ ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯದಲ್ಲಿ ಮುಖ್ಯಮಂತ್ರಿಯವರ ಕೌಶಲ್ಯ ಕರ್ನಾಟಕ ಯೋಜನಾನುಷ್ಠಾನದ ಪ್ರಗತಿಯಲ್ಲಿ ಸರ್ಕಾರದ ಯೋಜನೆಗಳನ್ನು ಫಲಾನುಭವಿಗಳಿಗೆ ಸರಳ/ಸುಲಭ ಮಾರ್ಗದಲ್ಲಿ ತಲುಪಿಸುವ ಮತ್ತು ಅರಿವು ಮೂಡಿಸುವ ಸಲುವಾಗಿ ಸರ್ಕಾರ ಹಮ್ಮಿಕೊಂಡ ಕಾರ್ಯಕ್ರಮಗಳು ಯಾವುವು;
ಆ) ಯೋಜನಾನುಷ್ಠಾನದ ಫಲಾನುಭವಿಗಳ ಸಂಖ್ಯೆಯೆಷ್ಟು; ಅವರಿಗೆ ಒದಗಿಸಿಕೊಡುತ್ತಿರುವ ತರಬೇತಿ ಮತ್ತು ತದನಂತರ ನೀಡಲಾಗುತ್ತಿರುವ ಮಾರ್ಗದರ್ಶನ ಹಾಗೂ ಆರ್ಥಿಕ ನೆರವು ಯಾವುವು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)
ಇ) ವಿಶೇಷತ: ಗ್ರಾಮೀಣರಿಗೆ, ಕುಶಲಕರ್ಮಿಗಳಿಗೆ, ನಿರುದ್ಯೋಗಿ ಯುವಕ/ಯುವತಿಯರಿಗೆ ಯೋಜನೆಯ ಸೌಲಭ್ಯಗಳನ್ನು ಸರಳ ವಿಧಾನಗಳಲ್ಲಿ ಒದಗಿಸಿಕೊಡುವ ಮತ್ತು ನೂತನ ತಂತ್ರಜ್ಞಾನಗಳ ಮೂಲಕ ತರಬೇತಿ ನೀಡುವ ಮೂಲಕ ಜೀವನೋಪಾಯಗಳನ್ನು ಸ್ವಯಂ ರೂಪಿಸಿಕೊಳ್ಳುವ ಕುರಿತು ಸರ್ಕಾರದ ಹೆಚ್ಚಿನ ಪರಿಣಾಮಕಾರಿ ಕಾರ್ಯಕ್ರಮಗಳ ಕುರಿತ ಕ್ರಿಯಾಯೋಜನೆಗಳೇನು?

----

**15/4/1034**

**ನೂತನ ತಾಲ್ಲೂಕುಗಳಿಗೆ ಮೂಲಭೂತ ಸೌಲಭ್ಯಗಳು**

1009 **ಉಮಾನಾಥ ಎ. ಕೋಟಿಯನ್ (ಮೂಡಬಿದರೆ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ನೂತನ ತಾಲ್ಲೂಕು ಎಂದು ಘೋಷಿಸಿರುವ ಮೂಡಬಿದ್ರೆ ಮತ್ತು ಮುಲ್ಕಿ ತಾಲ್ಲೂಕುಗಳ ಅಭಿವೃದ್ಧಿಯ ದಿಶೆಯಲ್ಲಿ ಸರ್ಕಾರ ರೂಪಿಸಿರುವ ಮತ್ತು ಅನುಷ್ಠಾನಗೊಳಿಸುತ್ತಿರುವ ಯೋಜನಾ ಸೌಲಭ್ಯಗಳಾವುವು ?

(ಸಂಪೂರ್ಣ ವಿವರ ನೀಡುವುದು);

----

15/4/1353

**ಶ್ರಮಿಕ ಕಾರ್ಮಿಕರುಗಳಿಗೆ ಸೌಲಭ್ಯಗಳು**

1010 **ಉಮಾನಾಥ ಎ. ಕೋಟಿಯನ್ (ಮೂಡಬಿದರೆ):**

ಮಾನ್ಯ **ಕಾರ್ಮಿಕ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಜ್ಯದಲ್ಲಿ ಕಾರ್ಮಿಕರು ಶ್ರಮಿಸುತ್ತಿರುವ ಕಡೆಗಳಲ್ಲಿ ಸೂಚಿತ ಪ್ರಮಾಣದಲ್ಲಿ ಮೂಲಭೂತ ಸೌಲಭ್ಯ/ ಸೌಕರ್ಯಗಳನ್ನು ಒದಗಿಸಿಕೊಡಲಾಗುತ್ತಿದೆಯೇ (ಸೂಚಿತ ಸೌಲಭ್ಯಗಳ ವಿವರಗಳನ್ನು ನೀಡುವುದು);
ಆ) ಉದ್ಯೋಗ ಸ್ಥಳಗಳಲ್ಲಿ ಕಾರ್ಮಿಕರ/ಮಹಿಳಾ ಕಾರ್ಮಿಕರ ಸಂರಕ್ಷಣೆ ಮತ್ತು ಸುಭಂರ್ರತೆಗಾಗಿ ಕೈಗೊಂಡಿರುವ ಪರಿಣಾಮಕಾರಿ ಕಾನೂನು ನಿಯಮ ಮತ್ತು ಅವುಗಳ ಕಟ್ಟುನಿಟ್ಟಿನ ಪಾಲನೆಗಾಗಿ ಕೈಗೊಂಡ ಕ್ರಮಗಳೇನು;
ಇ) ಗಾರ್ಮೆಂಟ್ಸ್‌ಗಳಲ್ಲಿ ಬಹುತೇಕ ಕಾರ್ಮಿಕರು ಮಹಿಳೆಯರಾಗಿದ್ದು ವಿಶೇಷತಃ ಬೆಂಗಳೂರು ಸೇರಿದಂತೆ ಮಹಾನಗರ ಪ್ರದೇಶಗಳಲ್ಲಿ ಮಹಿಳಾ ಪೊಲೀಸ್ ಠಾಣೆ ಮತ್ತಿತರ ಸೌಲಭ್ಯಗಳು ಇರುವುದನ್ನು ಸರ್ಕಾರ ಖಚಿತ ಪಡಿಸಿಕೊಂಡಿದೆಯೇ;
ಈ) ಹಾಗಿದ್ದಲ್ಲಿ, ಪೊಲೀಸ್ ಠಾಣೆಯ ಕೊರತೆ ಇರುವ ಕಡೆಗಳಲ್ಲಿ ಸಕಾಲಿಕವಾಗಿ ಠಾಣೆಗಳನ್ನು ಪ್ರಾರಂಭಿಸುವಲ್ಲಿ ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

----

15/4/1354

**ಅರಣ್ಯ ಸಮಿತಿಗಳು**

1011 **ಉಮಾನಾಥ ಎ. ಕೋಟಿಯನ್ (ಮೂಡಬಿದರೆ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -

ಅ) ರಾಷ್ಟ್ರೀಯ ಅರಣ್ಯ ನೀತಿ ಸಲಹೆಯ ಮೇರೆಗೆ ಅರಣ್ಯ ಸಂರಕ್ಷಣೆ, ಕಾಡು ಒತ್ತುವರಿ, ಕಾಳ್ಗಿಚ್ಚು, ಮರ ಕಡಿತಲೆ, ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆ, ವನ್ಯ ಪ್ರಾಣಿಗಳ ಭೇಟೆ ಮುಂತಾದವುಗಳನ್ನು ತಡೆಗಟ್ಟುವ ಉದ್ದೇಶದೊಂದಿಗೆ ಅರಣ್ಯ ಸಮಿತಿಯು ಅಸ್ತಿತ್ವಕ್ಕೆ ಬಂದಿದೆಯೇ (ಸಮಿತಿಗಳ ಜಿಲ್ಲಾವಾರು ಮಾಹಿತಿ ನೀಡುವುದು);
ಆ) ಸದರಿ ಉದ್ದೇಶಗಳ ಪರಿಪಾಲನೆಗಾಗಿ ಸಮಿತಿಗಳಿಗೆ ನೀಡಿರುವ ಅಧಿಕಾರ ಮತ್ತು ಕಾರ್ಯವ್ಯಾಪ್ತಿಗಳೇನು; ಅರಣ್ಯ ಸಮಿತಿಗಳ ಕಾರ್ಯಕ್ಷಮತೆ, ಉದ್ದೇಶಗಳ ಸಾಫಲ್ಯತೆ ಮತ್ತು ಸಮಿತಿ ಸ್ಥಳೀಯವಾಗಿ ಮತ್ತು ಇಲಾಖಾ ವ್ಯಾಪ್ತಿಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸಲಾಗಿದೆಯೇ; ಈ ಕುರಿತಾದ ಸಮೀಕ್ಷಾ ವರದಿಗಳೇನು;
ಇ) ಅರಣ್ಯ ಇಲಾಖೆ ಮತ್ತು ಅರಣ್ಯ ಸಮಿತಿಗಳು ಜಂಟಿಯಾಗಿ ಉದ್ದೇಶಿತ ಅರಣ್ಯ ಸಂರಕ್ಷಣಾ ಕಾರ್ಯಗಳು ಸಫಲಗೊಂಡಿವೆಯೇ; ಪ್ರಸ್ತುತ ಅವುಗಳನ್ನು ಸಕ್ರಿಯಗೊಳಿಸುವ ಮತ್ತು ಪ್ರೋತ್ಸಾಹಿಸುವ, ಬದ್ಧತೆಯುಳ್ಳ ಅಧಿಕಾರಿ ವರ್ಗವನ್ನು ಆ ಉದ್ದೇಶಗಳಿಗಾಗಿ ನೇಮಿಸುವ ಕುರಿತು ಸರ್ಕಾರದ ಪರಿಣಾಮಕಾರಿ ಕ್ರಮಗಳೇನು?

----

15/4/401

## ಮುಜರಾಯಿ ದೇವಸ್ಥಾನಗಳು

1012 **ಉಮೇಶ್ ವಿ ಕತ್ತಿ (ಹುಕ್ಕೇರಿ):**

ಮಾನ್ಯ **ಕಂದಾಯ ಇಲಾಖೆಯಿಂದ ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಉತ್ತರ ಕರ್ನಾಟಕದಲ್ಲಿ ಬರುವ ಮುಜರಾಯಿ ದೇವಸ್ಥಾನಗಳೆಷ್ಟು; (ದೇವಸ್ಥಾನದ ಹೆಸರು ಮತ್ತು ಗ್ರಾಮಗಳ ಸಮೇತ ಮಾಹಿತಿ ನೀಡುವುದು)
ಆ) ರಾಜ್ಯದಲ್ಲಿ 2019-20ನೇ ಸಾಲಿನಲ್ಲಿ ಮುಜರಾಯಿ ಇಲಾಖೆಯಿಂದ ಎಷ್ಟು ದೇವಸ್ಥಾನಗಳ ಜೀರ್ಣೋದ್ಧಾರ ಮತ್ತು ಅಭಿವೃದ್ಧಿಗಾಗಿ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; (ತಾಲ್ಲೂಕುವಾರು/ದೇವಸ್ಥಾನವಾರು ವಿವರ ನೀಡುವುದು)
ಇ) ಈ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಅನುದಾನ ಬಿಡುಗಡೆ ಮಾಡಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು;
ಈ) ಹುಕ್ಕೇರಿ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ 2019-20ನೇ ಸಾಲಿನಲ್ಲಿ ಮುಜರಾಯಿ ಇಲಾಖೆಯಿಂದ ಎಷ್ಟು ದೇವಸ್ಥಾನಗಳ ಜೀರ್ಣೋದ್ಧಾರ ಮತ್ತು ಅಭಿವೃದ್ಧಿಗಾಗಿ ಅನುದಾನ ಮಂಜೂರು ಮಾಡಲಾಗಿದೆ? (ದೇವಸ್ಥಾನವಾರು ವಿವರ ನೀಡುವುದು)

----

**15/4/529**

## ಕ್ರೀಡಾಂಗಣದಲ್ಲಿ ಮೂಲ ಭೂತ ಸೌಕರ್ಯಗಳು

1013 **ಟಿ. ವೆಂಕಟರಮಣಯ್ಯ (ಅಪ್ಪ ಕರನಹಳ್ಳಿ ಟಿ.ವೆಂಕಟೇಶ್) (ದೊಡ್ಡಬಳ್ಳಾಪುರ):**

ಮಾನ್ಯ **ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಕ್ರೀಡಾಂಗಣವು 10.00 ಎಕರೆ ಜಮೀನಿನಲ್ಲಿ ಕ್ರೀಡಾಂಗಣವಿದ್ದು, ಕ್ರೀಡಾ ಸಂಕೀರ್ಣ, ಹೊರಾಂಗಣ ಕ್ರಡಾಂಗಣ ಒಳಾಂಗಣ ಕ್ರೀಡಾಂಗಣ, ಈಜು ಕೊಳ, ಕ್ರೀಡಾ ಹಾಸ್ಟೆಲ್, ಹೆಲ್ತ್ ಕ್ಲಬ್, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸಂಪರ್ಕ, ಕಾಂಪೌಂಡ್ ವ್ಯವಸ್ಥೆ ಹಾಗೂ ಮೂಲಭೂತ ಸೌಕರ್ಯಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;
ಆ) ಬಂದಿದಲ್ಲಿ, ಇವುಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

----

**15/4/530**

## ಗಿಡಗಳನ್ನು ನೆಡಲು ಕಾನೂನು

1014 **ಟಿ. ವೆಂಕಟರಮಣಯ್ಯ (ಅಪ್ಪ ಕರನಹಳ್ಳಿ ಟಿ.ವೆಂಕಟೇಶ್) (ದೊಡ್ಡಬಳ್ಳಾಪುರ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **: -**

ಅ) ರಾಜ್ಯವು ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಿದ್ದು, ಪ್ರತಿ ವರ್ಷ ಹೆಚ್ಚು ಹೆಚ್ಚು ಹಸಿರು ಕ್ರಾಂತಿಯನ್ನು ಮಾಡಲು ಪ್ರತಿ ವರ್ಷ ಕಡ್ಡಾಯವಾಗಿ ಪರಿಸರಕ್ಕೆ ಮತ್ತು ರೈತರಿಗೆ ಉಪಯುಕ್ತವಾಗುವ ಗಿಡಗಳನ್ನು ನೆಡಲು ಕಾನೂನು ಜಾರಿಗೆ ತರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:

ಆ) ಇದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

----

15/4/904

**ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ತೆರವು**

**1015 ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ):**

ಮಾನ್ಯ **ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ರಾಜ್ಯದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ತೆರವಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ಇಂತಹ ಕಟ್ಟಡಗಳನ್ನು ಈಗಾಗಲೇ ಗುರುತಿಸಿದೆಯೇ; (ಜಿಲ್ಲಾವಾರು ವಿವರ ಒದಗಿಸುವುದು)
ಆ) ಇಂತಹ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳು ಸರ್ಕಾರಿ ಕಟ್ಟಡಗಳೇ ಅಥವಾ ಖಾಸಗಿಯವರ ಕಟ್ಟಡಗಳೇ; (ವಿವರ ನೀಡುವುದು)
ಇ) ಕಳೆದ 2 ವರ್ಷಗಳಿಂದ ಈ ರೀತಿಯ ದುರಂತಕ್ಕೊಳಗಾದ ಕಟ್ಟಡಗಳೆಷ್ಟು; (ಘಟನೆಗಳ ವಿವರ ಮತ್ತು ಇದರಿಂದ ಉಂಟಾದ ಸಾವುಗಳ ನೋವು ಮಾಹಿತಿ ಒದಗಿಸುವುದು)
ಈ) ಸಾವಿಗೊಳಗಾದ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆಯೇ; ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;
ಉ) ಸದರಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಗುರುತಿಸುವಿಕೆ ಕಾರ್ಯ ನಡೆದಿದೆಯೇ; ಇದಕ್ಕೆ ಅನುಸರಿಸುವ ಮಾನದಂಡಗಳೇನು? (ವಿವರ ಒದಗಿಸುವುದು)

----

15/4/905

**ಬೆಳೆಹಾನಿ**

**1016 ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ):**

ಮಾನ್ಯ **ಅರಣ್ಯ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ **:** -

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಡುಪ್ರಾಣಿಗಳಿಂದ ರೈತರ ಬೆಳೆಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತಂತೆ ಎಷ್ಟು ಪ್ರಕರಣಗಳು ದಾಖಲಾಗಿವೆ (ತಾಲ್ಲೂಕುವಾರು ವಿವರ ಒದಗಿಸುವುದು)
ಆ) ಕಾಡುಪ್ರಾಣಿಗಳಿಂದ ಬೆಳೆಹಾನಿಯಾದ ರೈತರಿಗೆ ಯಾವ ಮಾನದಂಡದಲ್ಲಿ ಪರಿಹಾರ ಒದಗಿಸಲಾಗುತ್ತಿದೆ; (ವಿವರ ಒದಗಿಸುವುದು)
ಇ) ಕಾಡುಪ್ರಾಣಿಗಳಿಂದ ಬೆಳೆ ರಕ್ಷಿಸಲು ರೈತರಿಗೆ ಸೌರಶಕ್ತಿ ಬೇಲಿ ನಿರ್ಮಿಸಿಕೊಳ್ಳಲು ಸರ್ಕಾರ ಯೋಜನೆ ರೂಪಿಸಿದೆಯೇ; ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ಒದಗಿಸುವುದು)

----

**ಬೆಂಗಳೂರು - 560001.** **ಎಂ.ಕೆ. ವಿಶಾಲಾಕ್ಷಿ,**

**ಸೋಮವಾರ, 22ನೇ ಜುಲೈ, 2019.** **ಕಾರ್ಯದರ್ಶಿ (ಪ್ರ)**